ಅಚಲ

ದ್ವೈಮಾಸಿಕ, ಜುಲೈ 1996

- ರೋಬೋಟ್ (ಕವನ) —ಕೆ. ನಾರಾಯಣಸ್ವಾಮಿ
- ಚಿಂಪಾಂಜಿಗಳ ಚಾಂಪಿಯನ್ ಜೇನ್‌ಗುಡಾಲ್ —ವಿನುತೆ
- ಯುವ ಜನಾಂಗ ಮತ್ತು ಟಿ.ವಿ. —ಎಚ್. ಎಸ್. ಪಾರ್ವತಿ
- ದಿಟ್ಟತನದ ಪ್ರತೀಕವಾಗಿದ್ದ ಅರುಣಾ —ಜಿ. ರಾಮಕೃಷ್ಣ
- ಪುಸ್ತಕ ವಿಮರ್ಶೆ —ನೇಮಿಚಂದ್ರ, ಆಶಾ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

ಬೆಂಗಳೂರು

ಸಂಪುಟ : 12 ಸಂಚಿಕೆ : 3

"ಅಚಲ" ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಇಪ್ಪತ್ತೈದು ರೂಪಾಯಿಗಳನ್ನು ಎಂ. ಓ/ಡ್ರಾಫ್ಟ್ ಮೂಲಕ ಕಳುಹಿಸಿ. ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೆ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಸಂಪಾದಕ ಮಂಡಳಿ :

ಎನ್. ಗಾಯತ್ರಿ, ನೇಮಿಚಂದ್ರ, ದೇವಿ, ಡಾ॥ ಬಿ. ಎನ್. ಸುಮಿತ್ರಾಬಾಯಿ, ಶಾಂತಾನಾಗರಾಜ್.

ಚಂದಾ ವಿವರ :

ವಾರ್ಷಿಕ ಚಂದಾ	:	25 ರೂ.
ಆಜೀವ ಚಂದಾ	:	200 ರೂ.
ಸಂಸ್ಥೆಗಳಿಗೆ	:	250 ರೂ

Printed at Rohini Printers
Cottonpet, Bangalore-50
Published by, Dr. G. Ramakrishna on behalf of Jagruthi Mahila Adhyayana Kendra, Bangalore.
Editor—N. Gayathri

ಲೇಖನ, ಹಣ ಕಳುಹಿಸಬೇಕಾದ ವಿಳಾಸ:—

ಸಂಪಾದಕರು, 'ಅಚಲ'
ಬಿ–30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್,
9ನೇ ಕ್ರಾಸ್, ಒಂದನೇ ಮೇನ್
ವಿಜಯನಗರ 2ನೇ ಹಂತ
ಬೆಂಗಳೂರು–560 040

ಆತ್ಮೀಯ ಓದುಗರೆ,

ಜುಲೈ ಸಂಚಿಕೆಯ ಅಚಲ ತಡವಾಗಿ ಬರುತ್ತದೆ. ದಶಮಾನೋತ್ಸವದ ಸುಂದರ ಸಂಚಿಕೆಯ ನಂತರ ಅಚಲ ಪತ್ರಿಕೆಯನ್ನು ಹೆಚ್ಚು ನಿಯತವಾಗಿ ಮತ್ತು ಉತ್ತಮವಾಗಿ ತರಬೇಕೆಂಬ ನಮ್ಮ ಹಂಬಲಕ್ಕೆ ಮುದ್ರಣಕ್ಕೆ ಸಂಬಂಧಿಸಿದ ಅವ್ಯವಸ್ಥೆಗಳು, ಅನಾನುಕೂಲಗಳು ಅಡ್ಡಿಯಾಗಿವೆ. ಈ ಎಲ್ಲ ತೊಂದರೆಗಳನ್ನು ಸರಿಪಡಿಸಿಕೊಂಡು ಇನ್ನು ಮುಂದೆ ಪತ್ರಿಕೆ ಹೆಚ್ಚು ನಿಯತವಾಗಿ ಬರುವಂತೆ ಪ್ರಯತ್ನಿಸುತ್ತೇವೆ.

ನಿಮ್ಮ ಸಲಹೆ, ಸಹಕಾರಕ್ಕೆ ಯಾವಾಗಲೂ ಸ್ವಾಗತ.

—ಸಂ.

ಸಂಪಾದಕೀಯ

ಅರ್ಥಪೂರ್ಣ ಮಹಿಳಾ ಅಸ್ತಿತ್ವಕ್ಕಾಗಿ ಜಾತ್ಯಾತೀತತೆ

ಕಳೆದ ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ತಮ್ಮ ಚುನಾವಣೆಯ ಪ್ರಣಾಳಿಕೆಯಲ್ಲಿ, ಭಾಷಣಗಳಲ್ಲಿ ಮತ್ತೆ ಮತ್ತೆ ತಾವು ಸೆಕ್ಯುಲರ್ ತತ್ವಗಳ ಪರವಾದವರೆಂದು ಪ್ರತಿಪಾದಿಸಿದರು. ವಿಭಿನ್ನ ರಾಜಕೀಯ ಧ್ಯೇಯೋದ್ದೇಶಗಳನ್ನು ಹೊಂದಿದ್ದ ಪಕ್ಷಗಳೂ ಕೂಡ ಜಾತ್ಯಾತೀತತೆಯ ನೆಲೆಗಟ್ಟಿನ ಮೇಲೆ ಮತೀಯ ಶಕ್ತಿಗಳ ವಿರುದ್ಧ ಹೋರಾಡಲು ಚುನಾವಣಾ ಹೊಂದಾಣಿಕೆ ಮಾಡಿಕೊಂಡಿರುವುದಾಗಿ ಘೋಷಿಸಿ ಕೊಂಡವು. ಯಾವುದೀ ಜಾತ್ಯಾತೀತತೆ ? ಎನ್ನುವುದೇ ಇಂದು ನಮ್ಮ ಮುಂದಿರುವ ಪ್ರಶ್ನೆ.

ಭಾರತದ ಸಂದರ್ಭದಲ್ಲಿ ಜಾತ್ಯಾತೀತತೆಯೆನ್ನುವುದು ಒಂದು ಆದರ್ಶದ ಸ್ಥಿತಿಯೇ ಸರಿ. ಇಂತಹ ದೊಂದು ಸ್ಥಿತಿಯನ್ನು ಆದರ್ಶವನ್ನಾಗಿಟ್ಟುಕೊಂಡವರು ಮತ್ತು ಅದನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳು ವವರಲ್ಲಿ ಭಿನ್ನಾಭಿಪ್ರಾಯಗಳಿವೆ. ಬಹುಧರ್ಮೀಯ, ಬಹುಜಾತೀಯ ಸಾಮಾಜಿಕ ವ್ಯವಸ್ಥೆಯಿರುವ ಭಾರತದಲ್ಲಿ ಸರ್ವಧರ್ಮಗಳ ಸಮನ್ವಯ, ಸಹಿಷ್ಣುತೆಯೇ ಜಾತ್ಯಾತೀತತೆಯೆನಿಸಿಬಿಟ್ಟಿದೆ. ದೇಶದ ಸಂವಿಧಾನ ದಿಂದ ಹಿಡಿದು, ಬಹುಪಾಲು ರಾಜಕೀಯ ಪಕ್ಷಗಳು ಜಾತ್ಯಾತೀತತೆಯನ್ನು ವ್ಯಾಖ್ಯಾನಿಸುವುದು ಇದೇ ರೀತಿ ಯಲ್ಲಿ. ಧಾರ್ಮಿಕ ನಂಬಿಕೆ, ಆಚರಣೆಗಳು ವ್ಯಕ್ತಿಯ ವೈಯಕ್ತಿಕ ಬದುಕಿಗಷ್ಟೇ ಸೀಮಿತವಾಗಿರಬೇಕಲ್ಲದೆ ಸಾರ್ವ ಜನಿಕ ಜೀವನವನ್ನು ಪ್ರವೇಶಿಸಬಾರದು ಎನ್ನುವ ಧರ್ಮನಿರಪೇಕ್ಷತೆಯ ವ್ಯಾಖ್ಯಾನ ಕೂಡ ನಮ್ಮ ಮುಂದಿದೆ.

ಜಗತ್ತಿನಲ್ಲಿ ಚಾಲ್ತಿಯಲ್ಲಿರುವ ಎಲ್ಲ ಧರ್ಮಗಳೂ ತಾತ್ವಿಕವಾಗಿ ಮತ್ತು ಮೂಲಭೂತವಾಗಿ ಎಷ್ಟೇ ಜನಪರವಾಗಿ, ಮಾನವೀಯವಾಗಿ ಕಂಡರೂ ಆಚರಣೆಯಲ್ಲಿ ಮಾತ್ರ ಅತ್ಯಂತ ಸಂಕುಚಿತವಾಗಿ ಮತ್ತು ಶೋಷಕ ಅಂಶಗಳನ್ನು ಮೈಗೂಡಿಸಿಕೊಳ್ಳುತ್ತಾ ದಮನಕಾರಿಯಾಗಿ ವರ್ತಿಸಿರುವುದು ಚರಿತ್ರೆಯಲ್ಲಿ ಹಾಗೂ ವಾಸ್ತವದಲ್ಲಿ ಕಂಡುಬಂದಿರುವ ಸತ್ಯ. ಪುರುಷರ ರಚನೆಯಾದ ಎಲ್ಲ ಧರ್ಮಗಳು ಮನುಷ್ಯನ ಒಳಿತಿನ ಬಗ್ಗೆ ಚಿಂತಿಸುವಾಗ ಏಕಪಕ್ಷೀಯವಾಗಿ ಚಿಂತಿಸಿವೆ ಎಂಬುದು ಸುಳ್ಳಲ್ಲ. ಈ ಒಕ್ಕಣ್ಣಿನ ದೃಷ್ಟಿಯ ಪರಿಣಾಮವಾಗಿ ಜಾತ್ಯಾಂಧತೆಯ ಮಬ್ಬಿನಲ್ಲಿ ಹೆಣ್ಣಿನ ಬದುಕುವ ಬಯಕೆ, ಸ್ವಾತಂತ್ರ್ಯದ ಅಭೀಪ್ಸೆಗಳು ಬತ್ತಿಹೋಗಿವೆ.

1987ರ ಸೆಪ್ಟೆಂಬರ್ 4ರಂದು ದೇವ್ರೋರಾಲಾದಲ್ಲಿ ನಡೆದ ರೂಪ್‌ಕನ್ವರ್‌ಳ 'ಸತಿ'ಯ ಘಟನೆ, ಯಾವ ಜಾತಿಯ, ಧರ್ಮದವರನ್ನೇ ಆಗಲೀ ತಲೆತಗ್ಗಿಸುವಂತೆ ಮಾಡುವ ಘಟನೆ. ಮೃತ್ಯುವನ್ನು ಆರಾಧಿಸುವ, ವೈಭವಿಸುವ ಜೀವ ವಿರೋಧಿ ನಿಲುವು ಯಾವ ಸಂಸ್ಕೃತಿಗೂ ಭೂಷಣವಲ್ಲ. ಮಠಾಧಿಪತಿಗಳ, ಧರ್ಮರಕ್ಷಕರ ಸಮ್ಮತಿ ಈ ಪದ್ಧತಿಗೆ ಇತ್ತೆಂಬ ಕಾರಣಕ್ಕೆ ಸರ್ಕಾರವು ಅಮಾನುಷವಾಗಿ ವರ್ತಿಸಿದ್ದನ್ನು ನಾವು ಮರೆಯುವಂತಿಲ್ಲ.

ಈ ಘಟನೆಯನ್ನು ತಡೆಯುವುದಕ್ಕಾಗಲೀ, ನಂತರದ ವೈಭವೀಕರಣದ 'ಚುನರಿ' ಮಹೋತ್ಸವವನ್ನು ತಪ್ಪಿಸಲಾಗಲೀ ರಾಜ್ಯ ಹಾಗೂ ಕೇಂದ್ರ ಸರ್ಕಾರ ವಿಫಲವಾದ್ದನ್ನು ನೆನಪಿಸಿಕೊಳ್ಳಬಹುದು. ತಮ್ಮ ವೋಟಿನ ಬ್ಯಾಂಕುಗಳನ್ನು ಭದ್ರಪಡಿಸಿಕೊಳ್ಳಲು ಮತೀಯ ಪಕ್ಷಗಳನ್ನು, ಜಾತೀಯ ಪಂಗಡಗಳನ್ನು ಉಳಿಸಿ, ಬೆಳೆಸಿಕೊಳ್ಳ ಬಯಸುವ ರಾಜಕೀಯ ಧುರೀಣರಿಗೆ ಸತಿಯಾದರೇನು, ವಧೂ ದಹನವಾದರೇನು, ಎಲ್ಲಾ ವೋಟಿನ ರಾಜಕೀಯದಲ್ಲಿ ದಯೆ, ಧರ್ಮ, ಮಾನವೀಯ ಮೌಲ್ಯಗಳೂ ಕರಗಿಹೋಗಿವೆ.

ಹೆಣ್ಣಿನ ಬದುಕಿನಲ್ಲಿ ವಿವಾಹ ಸಂಸ್ಥೆಯ ಪಾತ್ರ ಬಹುಮುಖ್ಯ. ಈ ವೈವಾಹಿಕ ಸಂಬಂಧದಲ್ಲಿ ಹೆಣ್ಣು ಪಡೆಯುವ ಸ್ವಾತಂತ್ರ್ಯ/ಬಂಧನ ಅವಳು ಅನುಸರಿಸಬೇಕಾದ ಧಾರ್ಮಿಕ ವ್ಯವಸ್ಥೆಯ ಮಿತಿಗಳನ್ನು ಅವಲಂಬಿಸಿರುತ್ತದೆ. ವಿವಾಹ ಮುರಿದು ವಿಚ್ಛೇದನ ಅಪೇಕ್ಷಿಸುವ ವಿವಿಧ ಧರ್ಮೀಯ ಭಾರತದ ಮಹಿಳೆಯರು ವಿವಿಧ ಅನುಭವಗಳನ್ನು ಹೊಂದಿದವರಾಗಿದ್ದಾರೆ. 1980ರಲ್ಲಿ ಷಹನಾಜ್ ಶೇಖ್ ಸುಪ್ರೀಂ ಕೋರ್ಟಿಗೆ ರಿಟ್ ಹಾಕಿ ಹೇಗೆ ಇಸ್ಲಾಂ ಧರ್ಮ ತಮ್ಮ ಮೂಲಭೂತ ಅಗತ್ಯದ ಹಕ್ಕುಗಳನ್ನು ಕಸಿದುಕೊಂಡಿದೆ ಎಂದು ವಾದಿಸಿದ್ದರು. ಷಹನಾಜ್ ತಮ್ಮ ಅರ್ಜಿಯಲ್ಲಿ ಬಹುಪತ್ನಿತ್ವ, ತಲಾಖ್, ಮೊಹರ್ ಮತ್ತು ಪೂರ್ವಾರ್ಜಿತ ಆಸ್ತಿ ಹಕ್ಕು, ಇವುಗಳು ತಮ್ಮ ಅಸ್ತಿತ್ವಕ್ಕೆ ಧಕ್ಕೆ ಉಂಟುಮಾಡಿದೆ ಮತ್ತು ಅಸಮಾನತೆಯನ್ನು ರೂಪಿಸಿವೆ ಎಂದು ವಾದಿಸಿದ್ದರು. ಪ್ರಸಿದ್ಧ ಶಾಬಾನು ಪ್ರಕರಣದಲ್ಲಿ ಕೂಡ ಸುಪ್ರೀಂ ಕೋರ್ಟು ಶಾಬಾನು ಪರವಾಗಿ ತೀರ್ಪಿತ್ತರೂ ಶಾಬಾನುವಿಗೆ ನ್ಯಾಯ ದೊರೆಯಲಿಲ್ಲ. ಕ್ರಿಮಿನಲ್ ಪ್ರೊಸೀಜರ್ ಕೋಡ್ 125 ಸೆಕ್ಷನ್ ಪ್ರಕಾರ ಶಾಬಾನುವಿಗೆ ಸುಪ್ರೀಂ ಕೋರ್ಟು ನಿರ್ವಹಣಾ ಭತ್ಯೆಯನ್ನು ನೀಡಬೇಕೆಂದು ಆದೇಶ ಹೊರಡಿಸಿದರೂ ಮತಾಂಧ ಮುಸ್ಲಿಂರು ಶಾಬಾನು ತನ್ನ ಕೇಸು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದರು. 'ವೋಟು' ಪ್ರಿಯ ಸರ್ಕಾರ 'ಮುಸ್ಲಿಂ ಮಹಿಳೆಯರ ಹಕ್ಕುಗಳ ಕಾಯಿದೆ' ಮಾಡಿ ತನ್ನ ಜವಾಬ್ದಾರಿಯಿಂದ ಕೈ ತೊಳೆದುಕೊಂಡುಬಿಟ್ಟಿತು.

ಮುಸ್ಲಿಂರ ತಲಾಖಿನಂತೆ, ಕ್ರಿಶ್ಚಿಯನ್ ವಿವಾಹದಲ್ಲೂ ವಿಚ್ಛೇದನದ ಹಕ್ಕು ಮತ್ತು ಆಸ್ತಿಯ ಹಕ್ಕು ಸುಲಭ ಸರಳದ್ದಲ್ಲ. ವೈಯಕ್ತಿಕ ಕಾನೂನುಗಳ ವ್ಯಾಪ್ತಿಯಲ್ಲಿ ಬರುವ ವಿಚ್ಛೇದನ ಈ ಮಹಿಳೆಯರಿಗೆ ದುಬಾರಿಯ ಸಂಗತಿ. ಆದರೆ ಈ ಯಾವ ಮಹಿಳೆಯರ ಬೇಡಿಕೆಗಳ ಧ್ವನಿಗೂ ಸೊಪ್ಪು ಹಾಕದ ಆಡಳಿತಾರೂಢ ರಾಜಕೀಯ ಪಕ್ಷಗಳು ಮತೀಯ ಕಾನೂನುಗಳನ್ನು ಹಾಗೆಯೇ ಉಳಿಸಿಕೊಂಡು ಹೋಗುವ ತಂತ್ರವನ್ನು ಯಶಸ್ವಿಯಾಗಿ ನಡೆಸಿವೆ. ಅಲ್ಪ ಸಂಖ್ಯಾತ ಸಮುದಾಯವನ್ನು, ಅವರ ಮತಗಳ ಲಾಭಕ್ಕಾಗಿ ಓಲೈಸುತ್ತಾ ಬಂದಿವೆ. ಈ ಚಕ್ಕಂದದಾಟದಲ್ಲಿ ಹೆಣ್ಣು ನರಳುತ್ತಾ ಸಾಗಿದ್ದಾಳೆ.

ಇನ್ನು ಹೆಣ್ಣಿನ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ನಮ್ಮ ಧರ್ಮಗಳು ತಳೆಯುವ ರೀತಿ ಗಾಭರಿ ಹುಟ್ಟಿಸುವಂತದ್ದು. ಕಲ್ಕತ್ತೆಯ ಸಾರ್ವಜನಿಕ ಸಮಾರಂಭವೊಂದರಲ್ಲಿ ವೇದ ಪಠಣ ಮಾಡುತ್ತಿದ್ದ ಡಾ॥ ಅರುಂಧತಿ ರಾಯ್ ಚೌಧರಿಯವರನ್ನು ಪೂರಿಯ ಶಂಕರಾಚಾರ್ಯ ಸ್ವಾಮಿ ಬಹಿರಂಗವಾಗಿ ಬಾಯಿಬಡಿದು ಕೂಡಿಸಿದ್ದು ಇನ್ನೂ ನೆನಪಿನಲ್ಲಿದೆ. ಸತಿ ಪದ್ಧತಿಯನ್ನು ಪ್ರೋತ್ಸಾಹಿಸಿ, ಬೆಂಬಲಿಸಿದವರೂ ಈ ಸ್ವಾಮಿಗಳೇ. 'ಕುರಾನ್ ಅನ್ನು ಸೇರಿಸಿದಂತೆ ಜಗತ್ತಿನ ಎಲ್ಲ ಧರ್ಮಗಳೂ ಕಾಲದಿಂದ ಕಾಲಕ್ಕೆ, ಕಾಲದ ಅಗತ್ಯಕ್ಕೆ ತಕ್ಕಂತೆ ಬದಲಾಗಬೇಕಿದೆ' ಎಂದು ಪತ್ರಿಕಾ ಸಂದರ್ಶನವೊಂದರಲ್ಲಿ ನುಡಿದ ನೆರೆಯ ಬಾಂಗ್ಲಾದೇಶದ ತಸ್ಲೀಮಾ ನಸ್ರೀನ್‌ಳ ಜೀವದ ಬೆಲೆ ಕೇಳಿದ ಜನರೂ ನಮ್ಮ ನೆರೆಯಲ್ಲೇ ಇದ್ದಾರೆ.

ಈ ಎಲ್ಲಾ ಅನುಭವಗಳು ಹೆಣ್ಣಿನ ಬದುಕಿಗೆ ಕಠೋರವೆನಿಸಿ ಧರ್ಮನಿರಪೇಕ್ಷತೆಯ ಮೌಲ್ಯಗಳಿಗಾಗಿ ಹಾತೊರೆಯುವಂತಾಗುವುದು, ಇಲ್ಲವೇ ಅಂತಹದೊಂದು ಸ್ಥಿತಿಯು ಅವಳ ಬಹಳಷ್ಟು ಸಮಸ್ಯೆಗಳಿಗೆ ಪರಿಹಾರವಾಗುವುದು ಎಂಬ ತಿಳಿವನ್ನು ಹುಟ್ಟಿಸುವುದು ಇಂದು ಅಗತ್ಯವಾಗಿ ಆಗಬೇಕಾದ ಕಾರ್ಯ. ಕಳೆದ ಹತ್ತು ವರ್ಷಗಳಿಂದೀಚೆಗೆ ಸುಪ್ರೀಂ ಕೋರ್ಟು ನೀಡಿರುವ ಹಲವಾರು ಪ್ರಗತಿದಾಯಕ ತೀರ್ಪುಗಳು ದೇಶವನ್ನು ಸಮಾನ ಕಾನೂನಿನ, ಸಮಾನ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕೆ ತರುವ ಪ್ರಯತ್ನಗಳಾಗಿವೆ. ಪ್ರತಿಯೊಂದು ತೀರ್ಪಿನಲ್ಲೂ ಭಾರತದಾದ್ಯಂತ ಒಂದು ಸಮಾನ ನಾಗರಿಕ ಸಂಹಿತೆ ರೂಪಿಸಲು ಪ್ರಯತ್ನಿಸಬೇಕೆಂಬ ಸಂವಿಧಾನದ 44ನೇ ಕಲಮುಗೆ ಕೇಂದ್ರ ಸರ್ಕಾರದ ಕಾನೂನು ಇಲಾಖೆ ಏನು ಕ್ರಮ ತೆಗೆದುಕೊಂಡಿದೆಯೆಂದು ಸುಪ್ರೀಂ ಕೋರ್ಟು ಪ್ರಶ್ನಿಸಿದೆ ಮತ್ತು ಸಮಾನ ಸಂಹಿತೆಯನ್ನು ಜಾರಿಗೆ ತರಲು ಬೇಕಾಗುವಂತಹ ಸನ್ನಿವೇಶ ನಿರ್ಮಾಣ ಮಾಡದಿರುವುದಕ್ಕೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡದ್ದೂ ಇದೆ.

ಆದರೆ ಸಮಾನ ಸಿವಿಲ್ ಸಂಹಿತೆಯೆನ್ನುವುದು ಸ್ಪಷ್ಟ ಚಿತ್ರವೊಂದನ್ನು ಪಡೆಯದೆ ರಾಜಕೀಯ ಸಂಕಲ್ಪದ ಬಲವಿಲ್ಲದೆ ನರಳುತ್ತಿದೆ. ಇಡೀ ದೇಶವನ್ನು 'ಹಿಂದುತ್ವ' ರಾಷ್ಟ್ರವನ್ನಾಗಿ ಮಾಡಹೊರಟಿರುವ ಸಮುದಾಯವೂ ಸಮಾನ ಸಿವಿಲ್ ಸಂಹಿತೆಯನ್ನು ಏಕಧರ್ಮೀಯ ಸಂಹಿತೆಯನ್ನಾಗಿ ಮಾಡಹೊರಟಿದೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ದೇಶದ ಎಲ್ಲ ಜನರ ಪರವಾಗಿ, ಎಲ್ಲಾ ಧಾರ್ಮಿಕ ಗೊಡ್ಡುಗಳನ್ನು–ಮಠಾಧಿಪತಿಗಳ, ಮುಲ್ಲಾ ಪಾದ್ರಿಗಳ ಸಂಕುಚಿತತೆಯನ್ನು ಹಿಮ್ಮೆಟ್ಟಿಸುವಂತಹ ಹೋರಾಟ ಮಾಡಬೇಕಾಗಿದೆ. ಪಕ್ಷ ರಾಜಕಾರಣ ಹಾಗೂ ಧಾರ್ಮಿಕ ಮೂಲಭೂತವಾದಿಗಳ ಹಿತಾಸಕ್ತಿಯನ್ನು ಧಿಕ್ಕರಿಸುತ್ತಲೇ ಸಮಾನ ನಾಗರೀಕ ಸಂಹಿತೆಯ ಹೋರಾಟ ಸಾಗಬೇಕಾಗಿದೆ. ಮಾನವತೆ–ಸಾಮರಸ್ಯ–ಸಮಾನತೆಯೇ ಧ್ಯೇಯವಾದ ಧರ್ಮನಿರಪೇಕ್ಷ ಸಂಸ್ಕೃತಿಯಿಂದ ಮಾತ್ರ ಹೆಣ್ಣಿನ ಅಸ್ತಿತ್ವಕ್ಕೆ ಬೆಲೆ ಬಂದೀತು.

—ಎನ್. ಗಾಯತ್ರಿ

ವಂಶೋದ್ಧಾರದ ಪರಿ

ನಾಗಪುರದಲ್ಲಿ 63 ವರ್ಷದ ಮ್ಯಾಜಿಸ್ಟ್ರೇಟ್ ಮೇಲಾರಾಮ್ ಕುವರ್ ಸಿಂಹ ತನ್ನ ಮೊಮ್ಮಗಳ ವಯಸ್ಸಿನ ಹುಡುಗಿಯೊಡನೆ ಇತ್ತೀಚೆಗೆ ಜುಲೈ 20ರಂದು ತನ್ನ ಪತ್ನಿಯ ಸಮಕ್ಷಮದಲ್ಲಿಯೇ ವಿವಾಹವಾದ. ಕಾರಣ ಮೇಲಾರಾಂಗೆ ಒಬ್ಬ ಮಗಳು ಮಾತ್ರವಿದ್ದು, ತನ್ನ ವಂಶ ಮುಂದುವರೆಸುವ ಅಖಂಡ ಕಾರ್ಯಕ್ಕಾಗಿ ಗಂಡು ಮಗು ಹುಟ್ಟಿಸುವ ಅಗತ್ಯವಿತ್ತು. 55 ವರ್ಷದ ಆತನ ಪತ್ನಿ ಗಂಡು ಮಗನನ್ನು ಹೆತ್ತು ವಂಶ ಉದ್ಧಾರ ಮಾಡುವ ಸ್ಥಿತಿಯಲಿಲ್ಲ. ಹೆಂಡತಿ ಎಷ್ಟೇ ಬುದ್ಧಿವಾದ ಹೇಳಿದರೂ, ಅದು ಈ ನ್ಯಾಯಾಧಿಪತಿಯ ತಲೆಗೆ ಹೋಗದಾಗ, ಆತನ ಒದ್ದಾಟ ನೋಡಲಾರದೆ ಪತ್ನಿ 'ಮತ್ತೊಂದು ಮದುವೆ ಮಾಡಿಕೊಂಡು ನಿನ್ನ 'ಅದೃಷ್ಟ' ಪರೀಕ್ಷಿಸಿಕೋ' ಎಂದು ರೋಸಿ ಒಪ್ಪಿದಳು. ಸಾಕಷ್ಟು ಕಾಲದಿಂದ ಮೇಲಾರಾಮ್ ತನ್ನ 'ಪುತ್ರಕಾಮ'ವನ್ನು ಪೂರೈಸುವ ಸೂಕ್ತ ವಧುವಿಗಾಗಿ ಹುಡುಕಾಡಿದ. ಆದರೆ ಮೊದಲೇ ಮದುವೆಯಾಗಿದ್ದ ವಿಧವೆಯರು, ವಿಚ್ಛೇದಿತರು ಬಂದರೆ ಒಪ್ಪಲಾದೀತೆ? 'ಸೆಕೆಂಡ್ ಹ್ಯಾಂಡ್ ಹೆಣ್ಣು ನನಗೆ ಬೇಕಿಲ್ಲ' ಎಂದ ಈ ಸೆಕಂಡ್ ಹ್ಯಾಂಡ್ ಗಂಡು, ಕಡೆಗೂ ಓರ್ವ 'ಕನ್ಯೆ'ಯನ್ನು ಹುಡುಕಿ ವಿವಾಹವಾದ. ಇದೀಗ ಈ ಅಖಂಡ ವಂಶ ಬೆಳೆಯುವುದನ್ನು ಕಾದು ನೋಡಬೇಕು.

ಕವನ

ರೋಬೋಟ್

ಮಾರಾಟಕ್ಕಿದೆ ರೋಬೋಟ್
ಆಜೀವ ಪರ್ಯಂತ ಗ್ಯಾರಂಟಿ
ಚಿನ್ನದ ಬಣ್ಣದ ಸಜೀವ ವಿಗ್ರಹ
ಮನೆಗೇ ಬೆಳಕು
ಬಯಸಿದ್ದೇ ತಡ
ಕ್ಷಣಮಾತ್ರದಲ್ಲಿ ಷಡ್ರುಚಿಗಳು ಪ್ರತ್ಯಕ್ಷ
ಬಂಧು ಮಿತ್ರರಿಗೆ ಮುಗುಳ್ನಗೆಯ ಆತಿಥ್ಯ
ಬಟ್ಟೆ ಒಗೆದು ಇಸ್ತ್ರಿ ಮಾಡುತ್ತೆ
ಮನೆ ಸದಾ ಕಂಗೊಳಿಸುವ ಮುತ್ತು

ಬೆಳಗ್ಗೆ ಬೀಳ್ಕೊಡುತ್ತೆ
ಸಂಜೆ ಸ್ವಾಗತಿಸುತ್ತೆ
ಅದೆಷ್ಟೇಷ್ಟೋ ಸುಖ ನೀಡುತ್ತೆ
ವಂಶ ವೃಕ್ಷ ಬೆಳೆಸಿ ಪೋಷಿಸುತ್ತೆ
ಹಠ ಮಾಡಿದಲ್ಲಿ ಥಳಿಸಿದರೆ ಸಾಕು ಕೆನ್ನೆಗೆ
ಕಿಲುಬು ತೊಲಗಿ ಮತ್ತೆ ಕೆಲಸ ಮಾಡುತ್ತೆ
ಪೆಟ್ರೋಲು ಖರ್ಚು ಎನ್ನುವಿರಾ ?
ಹೊತ್ತಿಗೆ ಹಿಡಿಯಷ್ಟು ತುತ್ತು ಸಾಕು


ಅಂದವಾಗಿ ಅಲಂಕರಿಸುವಿರಾ ?
ನಿಮ್ಮ ಅಂತಸ್ತಿಗೆ ತಕ್ಕಂತೆ ನಿಲ್ಲುತ್ತೆ
ಹೋಂ ವರ್ಕ್‌ಗಳನ್ನು ಮಾಡಿಟ್ಟು
ಮಕ್ಕಳನ್ನು ಇಂಜಿನಿಯರ್, ವೈದ್ಯರನ್ನಾಗಿ ತಯಾರು ಮಾಡುತ್ತೆ
ಅದೆಷ್ಟೊಂದು ಲಾಭ
ಸುಮ್ಮ ಸುಮ್ಮನೆ ಹೇಳುತ್ತಿಲ್ಲ
ಖಚಿತವಾದುದು, ಬಾಳಿಕೆ ಬರುವಂಥಾದ್ದು
ಬೆಲೆ ಮೈನಸ್ ಲಕ್ಷ
ಚೌಕಾಶಿ ಮಾಡಬಹುದು
ಆಗಾಗ್ಗೆ ಬಂಗಾರದ ಮೂಟೆಗಳು
ದುರಾಶೆಯಿಂದ ಸಾಯಿಸಿದರೂ
ಆತ್ಮಹತ್ಯೆ ಚೀಟಿ ತಾನೇ ಬರೆದಿಟ್ಟಿರುತ್ತೆ

(ಅಶ್ವಿನಿ ಥೋಂಗ್ಡಿ ಅವರ "ಎಮೆಷೀನ್" ಕವಿತೆಯ ಆಧಾರದಿಂದ
ತೆಲುಗಿಗೆ ಎಸ್. ಜಯ ಅವರ ಅನುವಾದ)

ಕನ್ನಡಕ್ಕೆ : **ಕೆ. ನಾರಾಯಣಸ್ವಾಮಿ**

ಚಿಂಪಾಂಜಿಗಳ ಚಾಂಪಿಯನ್ ಜೇನ್ ಗುಡಾಲ್

★ ವಿನುತೆ



ಪೂರ್ವ ಆಫ್ರಿಕದಲ್ಲಿ ಟಾಂಜೇನಿಯಾ ಎಂಬ ಒಂದು ಪುಟ್ಟ ದೇಶವಿದೆ. ಈ ಟಾಂಜೇನಿಯಾ ತನ್ನಲ್ಲಿ ಕೆಲವು ಅದ್ಭುತ ರಮ್ಯಗಳನ್ನು ಹುದುಗಿಸಿಕೊಂಡಿದೆ. ನಿರ್ಭೀತವಾಗಿ, ತಮ್ಮ ರಾಜ್ಯದಲ್ಲಿ ಎದೆಯುಬ್ಬಿಸಿ ನಡೆಯುವ ಸಿಂಹಗಳು, ಉದ್ದುದ್ದ ದಂತಗಳಿರುವ ಆನೆಗಳು, ಬಹು ಸುಂದರವಾದ ಜಿಂಕೆಗಳು—ಹೀಗೆ ಹಲವಾರು ಪ್ರಾಣಿ ಪಕ್ಷಿಗಳು ಈ ಸುಂದರ ನಾಡಿನಲ್ಲಿವೆ. ಪ್ರಾಣಿಪ್ರಿಯರ, ಪ್ರಕೃತಿ ಆರಾಧಕರ ಕಾಶಿಯೆನಿಸಿದ ಈ ಟಾಂಜೇನಿಯಾದಲ್ಲಿ ಮತ್ತೊಂದು ಅದ್ಭುತವಿದೆ. ಅದೇ ಇಲ್ಲಿನ ಚಿಂಪಾಂಜಿಗಳು ಟಾಂಜೇನಿಯಾದ ಮತ್ತೊಂದು ವೈಶಿಷ್ಟ್ಯವಾದ ಟಾಂಗಾನ್ಯೀಕ ಸರೋವರದ ಉತ್ತರ–ಪೂರ್ವ ತೀರದಲ್ಲಿ ಸುಮಾರು 32 ಚದರ ಕಿ.ಮೀ. ವಿಸ್ತಾರದ ಗಾಂಬೆ ನ್ಯಾಶನಲ್ ಪಾರ್ಕ್ ಈ ಚಿಂಪಾಂಜಿಗಳ ಮನೆ.

ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞೆ ಜೇನ್ ಗುಡಾಲ್ 'ಇಕಾಲೊಜಿ'ಯ ಬೆಳವಣಿಗೆಗೆ ವಿಶಿಷ್ಟ ಕೊಡುಗೆ ನೀಡಿದ ಮಹಿಳಾ ವಿಜ್ಞಾನಿ. ಆಫ್ರಿಕಾದ ಕಾಡುಗಳಲ್ಲಿ ಚಿಂಪಾನ್ಜಿಗಳನ್ನು ಅವುಗಳ ಸಹಜ ವಾಸಸ್ಥಾನದಲ್ಲಿ ಅತ್ಯಂತ ನಿಕಟವಾಗಿ ಅಧ್ಯಯನ ಮಾಡಿದವಳು. ಆಕೆಯ ಸಂಶೋಧನಾ 'ಫೀಲ್ಡ್ ವರ್ಕ್' ಚಿಂಪಾನ್ಜಿಗಳ ಮೂರು ಪೀಳಿಗೆಗಳಿಗೆ, 35 ವರ್ಷಗಳಿಗೆ ವಿಸ್ತರಿಸಿ, ಸಸ್ತನಿಗಳನ್ನು ಕುರಿತ ಜಗತ್ತಿನ ಅತಿ ದೀರ್ಘ ಅಧ್ಯಯನವಾಗಿ ದಾಖಲೆ ಸ್ಥಾಪಿಸಿದೆ. ಈಕೆಯ ಅಧ್ಯಯನ ಚಿಂಪಾನ್ಜಿಗಳನ್ನು ಕುರಿತಂತೆ ಅನೇಕ ದಿಗ್ಭ್ರಮೆಯ ಸತ್ಯಗಳನ್ನು ಹೊರಹಾಕಿತು. ಮಾನವ ವಿಕಾಸದ ಹಾದಿಯತ್ತ ಬೆಳಕು ಚೆಲ್ಲಿತು. ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದ ಜೇನ್ ಗುಡಾಲ್‌ಗೆ ಕಳೆದ ಡಿಸೆಂಬರ್‌ನಲ್ಲಿ 'ನ್ಯಾಷನಲ್ ಜಿಯಾಗ್ರಫಿಕ್ ಸೊಸೈಟಿ'ಯ ಪ್ರತಿಷ್ಠಿತ ಹಬರ್ಡ್ ಪದಕ ದೊರೆಯಿತು.

ಈ ಮಹಾನ್ ಚೇತನದ ಬಗ್ಗೆ 'ಅಚಲ' ಪತ್ರಿಕೆಗಾಗಿ ಲೇಖನವನ್ನು ಬರೆದುಕೊಟ್ಟಿರುವ ಶ್ರೀಮತಿ ವಿನುತೆ 'CRY' ಸಂಸ್ಥೆಯಲ್ಲಿ ಸಂಶೋಧನಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ಮನಃಶಾಸ್ತ್ರ'ದಲ್ಲಿ ಸ್ನಾತಕೋತ್ತರ ಪದವಿ ಪಡೆದು ದಕ್ಷಿಣ ಭಾರತದ ಬಬೂನ್‌ಗಳನ್ನು ಕುರಿತು ವಿಶೇಷವಾಗಿ ಅಧ್ಯಯನ ನಡೆಸಿ, ಆ ವಿಷಯದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ.

ಈ ಚಿಂಪಾಂಜಿಗಳು ಜೇನ್ ಗುಡಾಲ್‌ರ ಉಸಿರು, ಜೀವನ, ಅಧ್ಯಯನ, ಸಾಧನೆ, ಕನಸು ಎಲ್ಲವೂ. ಸುಮಾರು 61 ವರ್ಷದ ಈ ಬ್ರಿಟಿಷ್ ಮಹಿಳೆ ತನ್ನ ಜೀವನವನ್ನೆಲ್ಲವೂ ಗಾಂಬೆ ಚಿಂಪಾಂಜಿಗಳ ಅಧ್ಯಯನ

ಕ್ಕೆಂದು ಮೀಸಲಿಟ್ಟಿರುವುದು ಅತ್ಯಂತ ವಿಶೇಷವಾದ ಸಂಗತಿ. ತನ್ನ 30 ವರ್ಷಗಳ ಸುದೀರ್ಘ ಅಧ್ಯಯನ ದಲ್ಲಿ ಜೇನ್ ಹಲವಾರು ಮೈಲಿಗಲ್ಲುಗಳನ್ನು ಸ್ಥಾಪಿಸಿದ್ದಾರೆ; ಚಿಂಪಾಂಜಿಗಳ ಬಗ್ಗೆ ಪ್ರಪಂಚದಲ್ಲಿ ಬೇರೆ ಯಾರೂ ತಿಳಿಯದಿದ್ದಷ್ಟು ತಿಳಿದಿದ್ದಾರೆ; ವೈಜ್ಞಾನಿಕ ಪ್ರಪಂಚಕ್ಕೆ ತಿಳಿಯುವ ಅನೇಕ ಹೊಸ ಸಂಗತಿಗಳನ್ನು ಹೊರಗೆಡವಿದ್ದಾರೆ. ಒಟ್ಟಿನಲ್ಲಿ ಗಾಂಬೆ ಚಿಂಪಾಂಜಿಗಳ ಜಾತಕವನ್ನೆಲ್ಲ ತಿಳಿದ ಏಕೈಕ ವ್ಯಕ್ತಿ ಈ ಜೇನ್ ಗುಡಾಲ್.

ಜೇನ್ ಮತ್ತು ಚಿಂಪಾಂಜಿಗಳ ಸುದೀರ್ಘ ಒಡನಾಟ ಅವರ ಎಳೆತನದಲ್ಲಿಯೇ ಆರಂಭವಾಯಿತು. ಜೇನ್ ಎರಡು ವರ್ಷದ ಮಗುವಾಗಿದ್ದಾಗ ಜುಬಿಲೀ ಎಂಬ ಒಂದು ಚಿಂಪಾಂಜಿ ಆಟದ ಗೊಂಬೆಯೊಂದಿಗೆ ಆಟವಾಡುತ್ತಿದ್ದುದಾಗಿ ಆಕೆ ನೆನಪಿಸಿಕೊಳ್ಳುತ್ತಾರೆ.ತನ್ನ ಬಾಲ್ಯದಿಂದಲೂ ತನಗೆ ವಿಶೇಷ ಆಸಕ್ತಿ ಇದ್ದು, ಆಫ್ರಿಕದ ಕಾಡುಗಳು, ಪ್ರಾಣಿ ಸಂಪತ್ತುಗಳ ಒಲುಮೆಯಿತ್ತು ಎನ್ನುತ್ತಾರೆ. ಅವರ 23ನೇ ವಯಸ್ಸಿನಲ್ಲಿ 1957ರಲ್ಲಿ ಆಫ್ರಿಕಾದ ಕಿನ್ಯಾಗೆ ಪ್ರಯಾಣ ಬೆಳೆಸಿದರು. ಅಲ್ಲಿ ಅದಾಗಲೇ ಪಳೆಯುಳಿಕೆ ಶಾಸ್ತ್ರದ ಬಗೆಗಿನ ತನ್ನ ಅತ್ಯದ್ಭುತ ಸಂಶೋಧನೆಗಳಿಂದ ವೈಜ್ಞಾನಿಕ ಪ್ರಪಂಚದ ಮನೆಮಾತಾಗಿದ್ದ ಡಾ॥ ಲೂಯಿ ಎಸ್. ಬಿ. ಲೀಕೆರವರನ್ನು ಭೇಟಿಯಾದರು. ಆಗಿನ್ನು ಆಫ್ರಿಕದ ಚಿಂಪಾಂಜಿಗಳ ಬಗ್ಗೆ ಹೊರಗಿನ ಪ್ರಪಂಚಕ್ಕೆ ಯಾವ ಮಾಹಿತಿಯೂ ಲಭ್ಯವಿರಲಿಲ್ಲ. ಡಾ॥ ಲೀಕೆಯುವರಿಗೆ ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಮುಂಬರುವ ಉತ್ಸಾಹಭರಿತ, ಸಾಹಸ ಮನೋಭಾವವುಳ್ಳ ವ್ಯಕ್ತಿಯೊಬ್ಬರು ಬೇಕಿತ್ತು. ಸುಮ್ಮನೆ ಪರೀಕ್ಷಿಸಲು ಡಾ॥ ಲೀಕೆ ಜೇನ್‌ಗೆ ಚಿಂಪಾಂಜಿಗಳನ್ನು ಅಭ್ಯಸಿಸಲು ಆಹ್ವಾನವಿತ್ತಾಗ, ಅವರಿಗೇ ಆಶ್ಚರ್ಯವಾಗುವಂತೆ, ಜೇನ್ ತಕ್ಷಣ ಒಪ್ಪಿಕೊಂಡರು. ಈಗಿನ ಟಾಂಜೇನಿಯಾದ ಗಾಂಬೆ ನ್ಯಾಷನಲ್ ಪಾರ್ಕ್‌ನಲ್ಲಿ 1957ರಲ್ಲಿ ಜೇನ್ ಕೆಲಸ ಆರಂಭಿಸಿದಾಗ ಪ್ರಪಂಚವೆಲ್ಲಾ ಈ ಒಬ್ಬಂಟಿ ಆಂಗ್ಲ ಯುವತಿಯ ಸಾಹಸದ ಬಗ್ಗೆ ಮೂಗಿನ ಮೇಲೆ ಬೆರಳಿಟ್ಟುಕೊಂಡಿತು. ಆದರೆ ಜೇನ್ ಡಾ॥ ಲೀಕೆಯುವರ ನಿರೀಕ್ಷೆಯನ್ನು ಮೀರಿ, ಬೃಹದಾಕಾರವಾಗಿ ಬೆಳೆದು, ತಮ್ಮ ಆಯ್ಕೆ ಸರ್ವಕಾಲಕ್ಕೂ ಸಾರ್ಥಕ ಎಂಬುದನ್ನು ನಿರೂಪಿಸಿದರು. ಅಂದಿನಿಂದ ಆರಂಭಿಸಿ ಸುಮಾರು 35 ವರ್ಷಗಳ ಕಾಲ ಈ ಬ್ರಿಟಿಷ್ ಮಹಿಳೆ ಸತತವಾಗಿ ಚಿಂಪಾಂಜಿಗಳನ್ನು ಅಭ್ಯಾಸ ಮಾಡಿ, ಚಿಂಪಾಂಜಿಗಳ ಬಗ್ಗೆ ಹೊರ ಪ್ರಪಂಚಕ್ಕೆ ಇದ್ದ ಅನೇಕ ಮಿಥ್ಯೆಗಳನ್ನು ಅಲ್ಲಗಳೆದು ಯಾರಿಗೂ ತಿಳಿದಿರದಿದ್ದ ಅನೇಕ ಸತ್ಯ ಸಂಗತಿಗಳನ್ನು ಹೊರಗೆಡವಿದ್ದಾರೆ.

ಜೇನ್ ಗುಡಾಲ್ 1934ರಲ್ಲಿ ಇಂಗ್ಲೆಂಡಿನಲ್ಲಿ ಜನಿಸಿದರು. ಎರಡನೇ ಮಹಾಸಮರದ ಸಮಯದಲ್ಲಿ ರಾಯಲ್ ಇಂಜನೀಯರ್ಸ್ ಪಡೆಯಲ್ಲಿ ಕೆಲಸದಲ್ಲಿದ್ದ ಜೇನ್‌ರ ತಂದೆ ಫ್ರಾನ್ಸ್, ಮಲಯಾ ದೇಶಗಳಿಗೆ ವರ್ಗವಾಗಿ ಹೋದರು. ಗ | ಜೇನ್ ಮತ್ತು ಆಕೆಯ ಸೋದರಿ ತಮ್ಮ ತಾಯಿ ವಾನ್‌ರೊಂದಿಗೆ ಅಜ್ಜಿಯ ಮನೆಗೆ ಹೋದರು. ಐದು ವರ್ಷದ ಬಾಲಕಿಯಾಗಿದ್ದಾಗ ಜೇನ್ ತನ್ನ ಕುಟುಂಬದೊಂದಿಗೆ ಬಂಧುಗಳ ಮನೆಗೆ ಹಳ್ಳಿಗೆ ಹೋದಾಗ ಜೇನ್ ಒಂದು ಕೋಳಿಯ ಹಿಂದೆ ಹೋದಳು. ಈ ಬಾಲಕಿಗೆ ಕೋಳಿಯ ಮೊಟ್ಟೆಗಳು ಎಲ್ಲಿಂದ ಬರುತ್ತವೆ ಎಂಬ ರಹಸ್ಯವನ್ನು ತಿಳಿಯುವ ತವಕ. ಕೋಳಿಯ ಹಿಂದೆಯೇ ಕೋಳಿಯ ಗೂಡಿನೊಳಗೆ ಈ ಪುಟ್ಟ ಬಾಲಕಿ ಸುಳಿದಾಗ ತಾಯಿಕೋಳಿ ಗಾಭರಿಯಿಂದ ಪುರ್ರೆಂದು ಗೂಡಿನಿಂದ ಹೊರ ಹಾರಿಹೋಯಿತು. ಜೇನ್ ಹೇಳುತ್ತಾರೆ, "ಆಗ ನನಗೆ ಪ್ರಾಣಿಗಳ ಅಧ್ಯಯನದಲ್ಲಿ ಅತ್ಯವಶ್ಯಕವಾದ ಮೊದಲ ಪಾಠವನ್ನು ಕಲಿತೆ. ಅದೇ ಸಹನೆ. ಗೂಡಿನಿಂದ ಹೊರ ಬಂದು ಹಿಂದಿನ ಹುಲ್ಲಿನ ಮೆದೆಯಲ್ಲಿ ಬಚ್ಚಿಟ್ಟುಕೊಂಡು ಕಾದೆ, ಕಾದೆ, ಕಾದೆ". ಇತ್ತ ನಾಲ್ಕು ಗಂಟೆಗಳ ಕಾಲವಾದರೂ ಬಾಲಕಿ ಕಾಣದಿದ್ದಾಗ ಗಾಭರಿಗೊಂಡ ಕುಟುಂಬದವರು ಪೋಲೀಸ್ ಕಂಪ್ಲೆಂಟ್ ಕೊಟ್ಟರು. ತನ್ನ ತಾಯಿಯು ಅಳು ದನಿಯಲ್ಲಿ ತನ್ನನ್ನು ಕೂಗುವುದು ಕೇಳಿಸಿದಾಗ ಹೊಲದಿಂದ ಬಂದೆ ; ತನ್ನನ್ನು ಬಯ್ಯುವ ಬದಲು, ತಾಯಿಯು ನನ್ನ ರೋಮಾಂಚನವನ್ನು ಹಂಚಿಕೊಳ್ಳಲು ತನ್ನೊಟ್ಟಿಗೆ ಕೂತಳು ಎಂದು ನೆನಪಿಸಿಕೊಳ್ಳುತ್ತಾರೆ.

ಈ ರೋಮಾಂಚನ ಮತ್ತು ಸಹನೆಯನ್ನು ಜೀವನ ಪೂರ್ತಿ ಆಕೆ ಉಳಿಸಿಕೊಂಡಿದ್ದು ಆಕೆ ಚಿಂಪಾಂಜಿಗಳ ನಂಬಿಕೆಯನ್ನು ಗಳಿಸಲು ಸಾಧ್ಯವಾಯಿತು. ತನ್ನ ಬಾಲ್ಯ ದಲ್ಲಿ ಡಾಕ್ಟರ್ ಡೋಲಿಟಲ್‌ನ ಪ್ರಾಣಿ ಪ್ರಪಂಚದ ಸಾಹಸಗಳ ಬಗ್ಗೆ ಹ್ಯೂ ಲಾಫ್ಟಿಂಗ್ ಬರೆದ ಪುಸ್ತಕ ಗಳನ್ನು ಓದಿ, ಬಾಲ್ಯದಿಂದಲೂ ಆಫ್ರಿಕದ ಕಾಡುಗಳಲ್ಲಿ ಪ್ರಾಣಿಗಳ ಮಧ್ಯೆ ಬದುಕಬೇಕೆಂಬ ಕನಸನ್ನು ಕಾಣ ತೊಡಗಿದರು. ಹದಿನೆಂಟನೆಯ ವಯಸ್ಸಿನಲ್ಲಿ ತನ್ನ ಹೈಯರ್ ಶಾಲೆಯನ್ನು ಮುಗಿಸಿ, ಜೇನ್ ಲಂಡನ್‌ನ ಫಿಲ್ಮ್ ಸ್ಟುಡಿಯೋದಲ್ಲಿ ಕೆಲಸ ಮಾಡುತ್ತಿದ್ದರು. 1956 ರಲ್ಲಿ ತನ್ನ ಸ್ನೇಹಿತೆಯ ತಂದೆ ತಾಯಿಯರು ಕಿನ್ಯಾದಲ್ಲಿ ನಡೆಸುತ್ತಿದ್ದ ಫಾರ್ಮ್ ನೋಡಲು ಆಹ್ವಾನ ಬಂದಾಗ ಬಹು ವರ್ಷದಿಂದ ಎದುರು ನೋಡುತ್ತಿದ್ದ ಅವಕಾಶ ಬಂದಂತಾಯಿತು.

ನೈರೋಬಿಯಲ್ಲಿ ಜೇನ್ ಡಾ॥ ಲೀಕೆಯನ್ನು ಭೇಟಿ ಯಾದಳು. ಅವರ ಬಳಿ ಕಾರ್ಯದರ್ಶಿಯಾಗಿ ಕೆಲಸ ಮಾಡಲಾರಂಭಿಸಿದಳು. ಡಾ॥ ಲೀಕೆ 1957ರಲ್ಲಿ ಆಕೆಗೆ ಚಿಂಪಾಂಜಿಗಳು ಟಾಂಗಾನ್ಯೀಕ ಸರೋವರದ ಬಳಿ ವಾಸಿ ಸಿರುವ ವಿಷಯ ಹೇಳಿ ಆಕೆಯೇನಾದರೂ ಕೆಲ ತಿಂಗಳು ಗಳ ಕಾಲ ಅವುಗಳ ಚಲನವಲನಗಳನ್ನು ಅಭ್ಯಸಿಸಲು ಸಾಧ್ಯವೇ ಎಂದು ಕೇಳಿದರು. ಜೇನ್‌ಗೆ ಆಹ್ವಾನ ಅವರ ಜೀವನದ ಮೈಲಿಗಲ್ಲುಗಳಲ್ಲಿ ಒಂದಾಯಿತು. ಲೀಕೆ ಯವರು ತಮ್ಮ ಈ ಯೋಜನೆಗೆ ಹಣ ಹೊಂದಿಸುವ ಪ್ರಯತ್ನಗಳನ್ನು ಆರಂಭಿಸಿದರು. ಇತ್ತ ಜೇನ್ ಇಂಗ್ಲೆಂಡ್‌ಗೆ ಮರಳಿ ಮುಂದಿನ 18 ತಿಂಗಳ ಕಾಲ ಅಲ್ಲಿಯೂ ಕೆಲಸ ಮಾಡಿ, ಚಿಂಪಾಂಜಿಗಳ ಬಗ್ಗೆ ಸಾಧ್ಯ ವಿದ್ದಷ್ಟೂ ಮಾಹಿತಿಯನ್ನು ಸಂಗ್ರಹಿಸಿದರು.

1960ರ ಜೂನ್‌ನಲ್ಲಿ ಜೇನ್ ತನ್ನ ತಾಯಿ ಯೊಂದಿಗೆ ಚಿಂಪಾಂಜಿ ಅಧ್ಯಯನಕ್ಕೆಂದು ಗಾಂಬೆ ಸ್ಟ್ರೀಮ್ ಚಿಂಪಾಂಜಿ ರಕ್ಷಿತ ಪ್ರದೇಶಕ್ಕೆ ಪದಾರ್ಪಣ ಮಾಡಿದಳು. ಈ ಇಬ್ಬರು ಮಹಿಳೆಯರು ಅಲ್ಲಿ ತಮ್ಮ ಟೆಂಟ್‌ಗಳನ್ನು ಹೂಡಿದಾಗ ಅವರಿಗೆ ಸಂಗಾತಿಗಳಾಗಿದ್ದ ವರು ಹಲವಾರು ಬಬೂನುಗಳು ಮಾತ್ರ. ನಾಗರಿಕ ಪ್ರಪಂಚದಿಂದ ದೂರವಾಗಿದ್ದರು ಅವರು.

ಜೇನ್ ತನ್ನ ಆಗಿನ ದಿನಚರಿಯಲ್ಲಿ ಪ್ರತಿದಿನ ಸೂರ್ಯ ಹುಟ್ಟುವಾಗಲೇ ಎದ್ದು 760 ಮೀಟರ್‌ನ ಒಂದು ಪರ್ವತವನ್ನು ಏರುತ್ತಿದ್ದಳು. ಅಲ್ಲಿ ಬೈನಾ ಕ್ಯುಲರ್‌ನಿಂದ ಚಿಂಪಾಂಜಿಗಳ ಅಸ್ಪಷ್ಟ ಆಕಾರವನ್ನು ನೋಡುವುದು, ಕ್ರಮೇಣ ಈ ಪರ್ವತದ ಮೇಲೆಯೇ ಟೆಂಟ್ ಹಾಕಿ ವಾಸಿಸುವುದು ಮಾಡಿದಳು.

ಹೀಗೆ ಜೇನ್ ಗುಡಾಲ್‌ಗೆ ಸತತ ಕಠಿಣ ಪರಿಶ್ರಮ ದಿಂದ ಎಂಟು ತಿಂಗಳುಗಳ ನಂತರ ಚಿಂಪಾಂಜಿಗಳ ದರ್ಶನವಾಯಿತು. ಅದೂ ಹೇಗೆ—ನೇರ ದಾಳಿಯಿಂದ. ಕೆಲಸಮಯದ ನಂತರ ಆಕೆಯ ಟೆಂಟ್ ಒಳಗೆ ಒಂದು ಗಂಡು ಚಿಂಪಾಂಜಿ ಕೆಲ ಬಾಳೆ ಹಣ್ಣುಗಳನ್ನು ಹೊತ್ತು ಕೊಂಡು ಹೋಯಿತು. ಇದಾದ ಕೆಲ ದಿನಗಳಲ್ಲಿ ಮತ್ತೆರಡು ಸ್ನೇಹಿತರೊಂದಿಗೆ ಬಾಳೆಹಣ್ಣು 'ಕದಿಯಲು' ಬಂದಾಗ ಜೇನ್‌ಗೆ ಹಿಡಿಸಲಾರದಷ್ಟು ಸಂಭ್ರಮ. ಅವು ಗಳ ಈ ಪರಿ ಆಕೆಗೆ ಒಂದು ಸಂದೇಶವನ್ನು ಮುಟ್ಟಿ ಸಿತು—"ನಾವು ನಿನ್ನನ್ನು ಒಪ್ಪಿಕೊಂಡಿದ್ದೇವೆ".

ಈ ಕಳ್ಳ ಚಿಂಪಾಂಜಿಗೆ ಬಿಳಿಯ ಗಡ್ಡವಿದ್ದುದ ರಿಂದ ಜೇನ್ ಇವನನ್ನು ಡೇವಿಡ್ ಗ್ರೇಬಿಯರ್ಡ್ ಎಂದು ಕರೆದಳು. ಡೇವಿಡ್ ನಂತರದ ದಿನಗಳಲ್ಲಿ ಜೇನ್ ನೀಡಿದ ಹಣ್ಣನ್ನು ಆಕೆಯ ಕೈಯಿಂದಲೇ ತೆಗೆದುಕೊಂಡಿ ದ್ದಲ್ಲದೇ ಆಕೆಯ ಕೈಯನ್ನು ಕೆಲ ಕ್ಷಣಗಳತನಕ ಅಮುಕಿ ಹಿಡಿದಿದ್ದ. ಬಹುಶಃ ಮಾನವ ಜನಾಂಗದ ಜೊತೆಯ ಪ್ರಪ್ರಥಮ ಸ್ಪರ್ಶವಿದು.

1962ರಲ್ಲಿ ಜೇನ್ ಇಂಗ್ಲೆಂಡ್‌ಗೆ ಮರಳಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿ ಗೆಂದು ನೋಂದಣಿ ಮಾಡಿಸಿದರು. ಮತ್ತೆ 18 ತಿಂಗಳ ನಂತರ ಗಾಂಬೆಗೆ ಹಿಂತಿರುಗಿ ಗಾಂಬೆ ಸ್ಟ್ರೀಮ್ ಸಂಶೋ ಧನಾ ಕೇಂದ್ರವನ್ನು ಆರಂಭಿಸಿದರು. ಆಕೆಯ ಸಂಶೋ ಧನೆಯ ಸಾಧನೆಗಳು ಹೊರ ಪ್ರಪಂಚಕ್ಕೆ ಡಾ॥ ಲೀಕೆಯ ಮೂಲಕ ರವಾನೆಯಾಗುತ್ತಿತ್ತು. ಅಮೆರಿಕ ಮತ್ತು ಯೂರೋಪ್‌ನಿಂದ ಸಂಶೋಧಕ ವಿದ್ಯಾರ್ಥಿಗಳ ಪ್ರವಾಹವೇ ಗಾಂಬೆಗೆ ಹರಿದುಬಂತು. ಚಿಂಪಾಂಜಿಗಳ ಅಧ್ಯಯನವು ಗಣನೀಯ ಪ್ರಮಾಣದಲ್ಲಿ ನಡೆಯ ಲಾರಂಭಿಸಿತು.

1975ರ ಮೇ 19 ಗಾಂಬೆ ಸಂಶೋಧನಾ ಕೇಂದ್ರದ ಇತಿಹಾಸದಲ್ಲಿ ಕರಾಳ ದಿನ. ಆ ರಾತ್ರಿ ಸರೋವರ ದಾಟಿ ಜೌಯರೆಯ ಕೆಲ ಸೈನಿಕರು ಆಯುಧ ಗಳೊಂದಿಗೆ ಕೇಂದ್ರವನ್ನು ಹೊಕ್ಕು ಮೂವರು ಅಮೆರಿ

ಕದ ಮತ್ತು ಒಬ್ಬ ಡಚ್ ಸಂಶೋಧಕರನ್ನು ಅಪಹರಿಸಿದರು. ಎರಡು ತಿಂಗಳುಗಳ ಸತತ ಸಂಧಾನ, ಮಾತುಕತೆಯ ನಂತರ ದೊಡ್ಡ ಪ್ರಮಾಣದ ಮೊತ್ತವನ್ನು ನೀಡಿ ಈ ನಾಲ್ವರು ಸಂಶೋಧಕರನ್ನು ಬಿಡಿಸಿಕೊಂಡರು. ಈ ಪ್ರಕರಣ ಜೇನ್‌ರ ಸಂಶೋಧನೆಯ ಮೇಲೆ ದುಷ್ಪರಿಣಾಮವನ್ನೇ ಬೀರಿತು. ಟಾಂಜೇನಿಯಾದ ಸರ್ಕಾರ ಗಾಂಬೆಯಲ್ಲಿ ಯಾರೂ ಇರಬಾರದೆಂಬ ಕಠಿಣ ಶಾಸನವನ್ನು ಹೊರಡಿಸಿತು. ಅಲ್ಲಿಂದ 675 ಕಿ.ಮೀ. ದೂರದ ದಾರ್-ಎ-ಸಲಾಮ್ ಎಂಬ ಪಟ್ಟಣದಲ್ಲಿ ಜೇನ್ ವಾಸ್ತವ್ಯ ಹೂಡಿ ತನ್ನ 15 ವರ್ಷಗಳ ಮಾಹಿತಿಯನ್ನು ಪುಸ್ತಕ ರೂಪದಲ್ಲಿ, ಲೇಖನ ಮಾಲೆಯಾಗಿ ಪ್ರಕಟಿಸಲಾರಂಭಿಸಿದರು.

ಜೇನ್ ಬರೆದಿರುವ ಕೆಲ ಪುಸ್ತಕಗಳು ಇಂದಿಗೂ ಅತ್ಯಂತ ಜನಪ್ರಿಯವಾಗಿವೆ. 1971ರಲ್ಲಿ ಬರೆದ "In the shadow of Man" ಎಂಬ ಪುಸ್ತಕ ಪ್ರಪಂಚದ 17 ಭಾಷೆಗಳಿಗೆ ಭಾಷಾಂತರವಾಗಿದೆ. ಇದರ ಜೋಡಿಯಾಗಿ ಬರೆದ "Through a Window" 1990ರಲ್ಲಿ ಹೊರಬಂತು. 1986ರಲ್ಲಿ ಪ್ರಕಟವಾದ "The Chimpanzees of Gombe" ಪ್ರಾಣಿ ವರ್ತನ ಶಾಸ್ತ್ರದ ಕ್ಷೇತ್ರದಲ್ಲಿನ ಒಂದು ಅತ್ಯುತ್ತಮ ಪುಸ್ತಕವಾಗಿದೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಪಳಯುಳಿಕೆಶಾಸ್ತ್ರ ತಜ್ಞ ಹಾಗೂ ಇಂದಿನ ಯುಗದ ಅತ್ಯಂತ ಮೇಧಾವಿ ವಿಜ್ಞಾನಿಗಳಲ್ಲಿ ಒಬ್ಬರಾದ ಸ್ಟೀಫನ್ ಜೇ ಗೋಲ್ಡ್ ಜೇನ್‌ರ ಈ ಪುಸ್ತಕವನ್ನು ಕುರಿತು "ಪಾಶ್ಚಾತ್ಯ ಪ್ರಪಂಚದ ಬಹು ದೊಡ್ಡ ವೈಜ್ಞಾನಿಕ ಸಾಧನೆಗಳಲ್ಲಿ ಒಂದು" ಎಂದು ಕರೆದಿದ್ದಾರೆ. ಅದೇ ವಿಶ್ವವಿದ್ಯಾಲಯದಲ್ಲಿ ಮಾನವ ಶಾಸ್ತ್ರಜ್ಞರಾಗಿರುವ ರಿಚರ್ಡ್ ರ್ಯಾಂಗ್ಹಾಮ್‌ನು ಜೇನ್ ಗುಡಾಲ್ ತನ್ನ ಈ ಕೃತಿಯಲ್ಲಿ ವಿಜ್ಞಾನಿಯೊಬ್ಬನ ಜಾಗರೂಕತೆಯೊಂದಿಗೆ ಮಾನವತಾವಾದಿಯೊಬ್ಬನ ಸೂಕ್ಷ್ಮಜ್ಞತೆಯನ್ನು ಕೂಡ ಬೆರೆಸಿದ್ದಾರೆ ಎಂದಿದ್ದಾರೆ.

ಜೇನ್ ಗುಡಾಲ್ ತನ್ನ ಚಿಂಪಾಂಜಿಗಳ ಅಧ್ಯಯನದಿಂದ ಹಲವಾರು ಕುತೂಹಲಕಾರಿ ಸಂಗತಿಗಳನ್ನು ಹೊರಗೆಡವಿದ್ದಾರೆ. 1963ರಲ್ಲಿ ಡೇವಿಡ್ ಗ್ರೇಬಿಯರ್ಡ್ ಒಂದು ಕಾಡು ಹಂದಿಯ ಮಾಂಸವನ್ನು ತಿನ್ನುವುದನ್ನು ಕಂಡರು. ಅಲ್ಲಿಯವರೆಗೂ ಚಿಂಪಾಂಜಿಗಳು ಮಾಂಸಭಕ್ಷಕರೆಂದು ಯಾವುದೇ ವಿಜ್ಞಾನಿಗೂ ತಿಳಿದಿರಲಿಲ್ಲ. ಇಷ್ಟೇ ಅಲ್ಲದೆ, ನಂತರ ಜೇನ್ ಚಿಂಪಾಂಜಿಗಳು ತಾವೇ ಕೆಲ ಜಾತಿಯ ಕೋತಿಗಳನ್ನು, ಕಾಡು ಹಂದಿಗಳನ್ನು, ಚಿಕ್ಕ ಮರಿ ಜಿಂಕೆಗಳನ್ನು ಬೇಟೆಯಾಡಿ ಕೊಂದು ತಿನ್ನುತ್ತವೆ; ಕೆಲವೊಮ್ಮೆ ಇಡೀ ಗುಂಪು ಬೇಟೆಯನ್ನು ಹಂಚಿಕೊಳ್ಳುವುದೂ ಉಂಟೆಂದು ತೋರಿಸಿದರು.

ಮನುಷ್ಯನ ಜೊತೆಯಲ್ಲಿ ಶೇಕಡಾ 99 ಭಾಗದಷ್ಟು ಆನುವಂಶಿಕ ಗುಣಗಳನ್ನು ಹಂಚಿಕೊಳ್ಳುವ ಚಿಂಪಾಂಜಿಗಳು ಬುದ್ಧಿಮಟ್ಟದಲ್ಲೂ ಮನುಷ್ಯನಿಗೆ ಹತ್ತಿರವಾಗಿವೆ ಎಂಬುದನ್ನು ತಮ್ಮ ಒಂದು ಸಂಶೋಧನೆಯಿಂದ ವಿವರಿಸುತ್ತಾರೆ. ಚಿಂಪಾಂಜಿಗಳು ಕಾಡಿನಲ್ಲಿ ಹುಲ್ಲಿನ ಕಡ್ಡಿ ಮುಂತಾದವನ್ನು ಸಾಧನಗಳನ್ನಾಗಿ ಉಪಯೋಗಿಸುತ್ತವೆ. ಡೇವಿಡ್ ಗ್ರೇಬಿಯರ್ಡ್ ಒಮ್ಮೆ ಕಾಡಿನಲ್ಲಿ ಹುಲ್ಲಿನ ಒಂದು ಉದ್ದ ಕಡ್ಡಿಯನ್ನು ತೆಗೆದುಕೊಂಡು ಒಂದು ಗೆದ್ದಲಿನ ಹುತ್ತದಲ್ಲಿ ಅದನ್ನು ಹಾಕಿ, ಹೊರಗೆಳೆದು, ಅದಕ್ಕೆ ಅಂಟಿಕೊಂಡಿದ್ದ ಹುಳುಗಳನ್ನು ತಿಂದದ್ದನ್ನು ಜೇನ್ ಕಂಡರು. ಈ "ಸಾಧನ-ಉಪಯೋಗ ವರ್ತನೆ" (tool using behaviours) ಪ್ರಾಣಿ ಪ್ರಪಂಚದ ಒಂದು ಮೈಲಿಗಲ್ಲು. ಮತ್ತೊಂದು ಸಾಧನ-ಉಪಯೋಗ ತಂತ್ರವನ್ನು ಚಿಂಪಾಂಜಿಗಳು ಬಳಸುವುದನ್ನು ಮೊತ್ತಮೊದಲ ಬಾರಿಗೆ ಜೇನ್ ಕಂಡರು. ಮರದ ಪೊಟರೆಯಲ್ಲಿ ಶೇಖರವಾಗಿರುವ ಒಂದು ಮುಷ್ಟಿಯಷ್ಟು ಎಲೆಗಳನ್ನು ಬಾಯಲ್ಲಿ ಹಾಕಿಕೊಂಡು ಒಂದು ಮುದ್ದೆಯಾಗಿ ಉಂಡೆ ಕಟ್ಟುವತನಕ ಜಗಿಯುತ್ತವೆ. ನಂತರ ಈ ಉಂಡೆಗಳನ್ನು ಪೊಟರೆಯೊಳಗೆ ಹಾಕಿ, ಅದ್ದಿ, ಆ ಉಂಡೆಯಿಂದ ನೀರನ್ನು ಹೀರುತ್ತವೆ. ಈ ರೀತಿ ಕೆಲ ಸಾಧನ ಕೌಶಲಗಳು ಮನುಷ್ಯನನ್ನು ಬಿಟ್ಟರೆ, ಚಿಂಪಾಂಜಿಗಳಲ್ಲಿ ಮಾತ್ರ ಕಂಡುಬರುತ್ತವೆ ಎನ್ನುತ್ತಾರೆ ಜೇನ್ ಗುಡಾಲ್.

ಜೇನ್ ಚಿಂಪಾಂಜಿಗಳನ್ನು ತನ್ನ ಸಂಗಾತಿಗಳಂತೆ, ಒಡನಾಡಿಗಳಂತೆ ಭಾವಿಸಿದುದೇ ಆಕೆಯ ಯಶಸ್ಸಿನ ಗುಟ್ಟು. ಅವುಗಳಿಗೆ ಪ್ರತ್ಯೇಕವಾದ ಹೆಸರುಗಳನ್ನಿಟ್ಟು, ಅವುಗಳನ್ನು ಜೊತೆಗಾರರನ್ನಾಗಿಸಿಕೊಂಡು ಅವರು ಅಭ್ಯಾಸ ಮಾಡಿದ್ದಾರೆ. ಮನುಷ್ಯರಲ್ಲಿರುವಂತೆಯೇ ಚಿಂಪಾಂಜಿಗಳಲ್ಲಿ 5 ವರ್ಷಗಳ ಮಗುತನ, ಬಾಲ್ಯಾವಧಿ, ನಂತರ ಹರೆಯ (9ರಿಂದ 13ನೆಯ ವಯಸ್ಸಿನವರೆಗೂ),

ಸೂರ್ಯನ ಮೊದಲ ಕಿರಣಗಳೊಂದಿಗೆ ತನ್ನ ದಿನಚರಿಯನ್ನು ಆರಂಭಿಸಿ ತನ್ನ ಜೀವನದ ಯೌವನ ಭಾಗವನ್ನೆಲ್ಲಾ ಚಿಂಪಾಂಜಿಗಳನ್ನು ಅಭ್ಯಸಿಸುವುದರಲ್ಲೇ ಜೇನ್ ಕಳೆದಿದ್ದಾರೆ. ಪರ್ವತವನ್ನೇರಿ, ಗಂಟೆಗಟ್ಟಲೆ, ದಿನಗಟ್ಟಲೆ ಚಿಂಪಾಂಜಿಗಳ ದರ್ಶನಕ್ಕಾಗಿಯೇ ಕಾದಿದ್ದುಂಟು. ಹೀಗೆ ಮಾಡುತ್ತಾ, ಅವುಗಳ ಆಹಾರ ಕ್ರಮ, ಸಾಮಾಜಿಕ ಜೀವನ, ಪ್ರೀತಿ ಪ್ರೇಮಗಳು, ತಲೆಮಾರುಗಳ ಎಣಿಕೆ ಎಲ್ಲವನ್ನೂ ಅವರು ದಾಖಲಿಸಿದ್ದಾರೆ. ತಮ್ಮ ಸುಮಾರು ಆರು ಪುಸ್ತಕಗಳಲ್ಲಿ ಅನೇಕ ವೈಜ್ಞಾನಿಕ ಲೇಖನಗಳಲ್ಲಿ 100ಕ್ಕೂ ಹೆಚ್ಚು ಚಿಂಪಾಂಜಿಗಳನ್ನು—ಮೂರು ತಲೆಮಾರುಗಳನ್ನು—ಕುರಿತು ಬರೆದಿದ್ದಾರೆ. ಪ್ರಾಣಿ ವರ್ತನೆಯ ಅಧ್ಯಯನ, ಸಂಶೋಧನೆಗಳಲ್ಲಿ ಜೇನ್‌ನ ಸಂಶೋಧನೆಯು ಅತಿ ಹೆಚ್ಚಿನ ದೀರ್ಘಾವಧಿಯದು ಎನ್ನಲಾಗಿದೆ.

ಮಧ್ಯ ವಯಸ್ಸು ಇತ್ಯಾದಿಗಳಿವೆ. ಅವುಗಳ ಆಯಸ್ಸು ಸುಮಾರು 50 ವರ್ಷಗಳು ಎಂಬೆಲ್ಲಾ ಮಾಹಿತಿ ಲಭ್ಯವಾಗಿರುವುದು ಆಕೆಯ ಸಂಶೋಧನೆಯಿಂದಲೇ. ಜೀವನ ಕ್ರಮವಷ್ಟೇ ಅಲ್ಲ, ನಮ್ಮಂತೆಯೇ ಚಿಂಪಾಂಜಿಗಳೂ ಕೂಡ ಪ್ರೀತಿ, ವಾತ್ಸಲ್ಯ, ಭಯ, ಕೋಪ, ಈರ್ಷ್ಯೆ ಮುಂತಾದ ಸಂವೇದನೆಗಳನ್ನು ತೋರಿಸುತ್ತವೆ. ತಮ್ಮ ಕುಟುಂಬದೊಂದಿಗೆ ನಿಕಟ ಬಾಂಧವ್ಯವನ್ನು ಹೊಂದಿರುತ್ತವೆ.

ಫ್ಲೊ ಎಂಬ ವಯಸ್ಸಾದ ಹೆಣ್ಣು ಚಿಂಪಾಂಜಿಯೊಂದು ಸತ್ತಾಗ, ಅವಳ ಮಗ ಫ್ಲಿಂಟ್ ದಿನಗಟ್ಟಲೆ ಅವಳ ದೇಹದ ಬಳಿ ರೋದನೆಗೈಯುತ್ತಾ ಕುಳಿತಿದ್ದನಂತೆ. ಕ್ರಮೇಣ ಆಹಾರವನ್ನೇ ತ್ಯಜಿಸಿ ಒಂದು ತಿಂಗಳ ಬಳಿಕ ತಾಯಿ ಸತ್ತ ಜಾಗದಲ್ಲಿಯೇ ತಾನೂ ಕುಸಿದು ಬಿದ್ದು ಸತ್ತ ಪ್ರಸಂಗವನ್ನು ಜೇನ್ ತಮ್ಮ ಪುಸ್ತಕದಲ್ಲಿ ವಿವರಿಸುತ್ತಾರೆ. ಮಕ್ಕಳ ಆಟಗಳು, ಪರಸ್ಪರ ಛೇಡಿಸುವುದು, ದೊಡ್ಡವರನ್ನು ಮರಿಗಳು ಆಹಾರಕ್ಕಾಗಿ ಬೇಡುವುದು, ವಿಧೇಯತೆ, ಎಲ್ಲವೂ ಮನುಷ್ಯರಂತಯೇ ಎನ್ನುತ್ತಾರೆ.

1964ರಲ್ಲಿ ಜೇನ್ ಡಚ್ ಮೂಲದ Wildlife ಛಾಯಾಗ್ರಾಹಕ Hugo van hawik ರನ್ನು ಪ್ರೀತಿಸಿ ಮದುವೆಯಾದರು. ಇವರಿಬ್ಬರ ಮಗ ಹ್ಯೂಗೋ ಅಥವಾ ಗ್ರಬ್ ಈಗ 29 ವರ್ಷದ ಯುವಕ. ತನ್ನ ತಾಯಿಯ ತಾಯಿ Vahhe ರ ಬಳಿ ಇಂಗ್ಲೆಂಡಿನಲ್ಲಿ ತನ್ನ ಬಾಲ್ಯವನ್ನು, ಶಿಕ್ಷಣವನ್ನು ಪೂರೈಸಿ ಗ್ರಬ್ ಕೂಡಾ ತಂದೆತಾಯಿಯರಂತೆಯೇ ವನ್ಯಜೀವಿಗಳ ಸಂಶೋಧನೆಯಲ್ಲಿ ಪಳಗಿದ್ದಾನೆ. ಈಗ ಪೂರ್ವ ಆಫ್ರಿಕಾದ ದಾರ್-ಎ-ಸಲಾಮ್‌ನಲ್ಲಿ ಕ್ರೀಡಾ ಮೀನುಗಾರಿಕೆಯ ಹವ್ಯಾಸವನ್ನಿಟ್ಟುಕೊಂಡಿದ್ದಾನೆ.

ಜೇನ್‌ರ ಮೊದಲ ಮದುವೆ ಮುರಿದ ನಂತರ, ಆಕೆ 1975ರಲ್ಲಿ ಪುನಃ ಡೆರೆಕ್ ಬ್ರೈಸ್‌ಸನ್ ಎಂಬಾತನನ್ನು ಮದುವೆಯಾದರು. ಡೆರೆಕ್ ಟಾಂಜೇನಿಯಾದ ಸಂಸತ್ತು ಭವನದ ಸದಸ್ಯರೂ, ಅಲ್ಲಿಯ ರಾಷ್ಟ್ರೀಯ ಉದ್ಯಾನವನಗಳ ನಿರ್ದೇಶಕರೂ ಆಗಿದ್ದರು. ದುರದೃಷ್ಟವಶಾತ್, ಡೆರೆಕ್ 1980ರಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ಅಸು ನೀಗಿದರು. ಈ ಘಟನೆಯು ಜೇನ್‌ರನ್ನು ಅಲ್ಲಾಡಿಸಿತು. ಆಕೆಯ ಸ್ನೇಹಿತೆ ಮೇರಿ ಸ್ಮಿತ ಹೇಳುವಂತೆ ಈ ಎರಡನೇ ಜೋಡಿ ಹೇಳಿ ಮಾಡಿಸಿದಂತಿತ್ತು. ಜೇನ್ ತನ್ನ ಗಂಡ ಡೆರೆಕ್‌ನನ್ನು ಅತಿಯಾಗಿ ಪ್ರೀತಿಸುತ್ತಿದ್ದರು. ದಾರ್-ಎ-ಸಲಾಮ್‌ನಲ್ಲಿರುವ ಆಕೆಯ ಮನೆಯಲ್ಲಿ ಡೆರೆಕ್‌ನು ತನ್ನ ತಾಯಿಯು, ತನ್ನ ಮಗನ ಹಾಗೂ ಆಕೆಯ ಹಳೆಯ "ಸ್ನೇಹಿತೆ" ಫಿಫಿ, ಅವಳ ಮಗ ಫೋಡೋನನ್ನು ಉಯ್ಯಾಲೆಯಾಡಿಸುತ್ತಿರುವ ಫೋಟೋಗಳಿವೆ. ಈ ಫೋಟೋಗಳು ಆಕೆಯ ಅಚ್ಚುಮೆಚ್ಚಿನವು.

ಈಗ ಜೇನ್ ಗುಡಾಲ್‌ಗೆ 62 ವರ್ಷಗಳು. ದಾರ್‌ನ ಜನರು ಆಕೆಯನ್ನು ಪ್ರೀತಿಯಿಂದ "ಮಾಮಾ ಬ್ರೈಸ್‌ಸನ್" ಎಂದು ಕರೆಯುತ್ತಾರೆ. ವರ್ಷದ ಎಂಟು ತಿಂಗಳುಗಳು ಆಕೆ ಇಡೀ ಪ್ರಪಂಚವನ್ನು ಸುತ್ತುತ್ತಾರೆ. ಕೆಲ ಸಮಯ ಗಾಂಬೆಯಲ್ಲಿ, ದಾರ್‌ನ ಮನೆಯಲ್ಲಿ, ಇಂಗ್ಲೆಂಡ್‌ನ ತನ್ನ ತಾಯಿಯ ಮನೆಯಲ್ಲಿ ಕಳೆಯುತ್ತಾರೆ. ವಿಶ್ವವಿದ್ಯಾನಿಲಯಗಳಲ್ಲಿ, ಮ್ಯೂಸಿಯಂಗಳಲ್ಲಿ, ಶಾಲೆಗಳಲ್ಲಿ, ಜನರನ್ನುದ್ದೇಶಿಸಿ, ಚಿಂಪಾಂಜಿಗಳ ಬಗ್ಗೆ, ಅವುಗಳ ಉಳಿವಿನ ಬಗ್ಗೆ, ತನ್ನ ಸಂಶೋಧನೆಯ ಬಗ್ಗೆ, ಅವುಗಳ ಅತಂತ್ರ ಸ್ಥಿತಿಯ ಬಗ್ಗೆ ಮನಮುಟ್ಟುವಂತೆ

ಮಾತನಾಡುತ್ತಾರೆ. ಚಿಂಪಾಂಜಿಗಳಿಂದು ಎದುರಿಸುತ್ತಿರುವ ಸಮಸ್ಯೆಗಳು ಹಲವಾರು. ತಮ್ಮ ವಾಸಸ್ಥಾನವಾಗಿರುವ ಕಾಡುಗಳ ನಾಶ, ಮಾಂಸಕ್ಕಾಗಿ ಅವುಗಳ ಅಪಹರಣ, ಇಲ್ಲವೇ ಸಾವು. ಸರ್ಕಸ್‌ಗಳಲ್ಲಿ, ಜೂಗಳಲ್ಲಿ ಮತ್ತು ಮುಖ್ಯವಾಗಿ ವೈದ್ಯಕೀಯ ಪ್ರಯೋಗಗಳಿಗೆ ಚಿಂಪಾಂಜಿಗಳು ಬಳಕೆಯಾಗುತ್ತಿವೆ. 1989ರಲ್ಲಿ ಅಮೆರಿಕಾದ Fish and Wildlife Service ವಿಭಾಗವು ಚಿಂಪಾಂಜಿಗಳನ್ನು ಅಂತರರಾಷ್ಟ್ರೀಯ ಅಳಿವಿನ/ನಾಶದ ಹಂತದಲ್ಲಿರುವ ಪ್ರಾಣಿಗಳ ಪಟ್ಟಿಯಲ್ಲಿ ಸೇರಿಸಿತು. ಇದು ಜೇನ್ ಗುಡಾಲ್‌ರ ಸತತ ಪರಿಶ್ರಮದ ಫಲ.

ಜೇನ್, ಚಿಂಪಾಂಜಿಗಳನ್ನು ಇರಿಸುವ ಜೂ ಮತ್ತು ಬಳಸುವ ಪ್ರಯೋಗಾಲಯಗಳಲ್ಲಿ ಅವುಗಳನ್ನು ಹಿಡಿದಿಡುವ ಬೋನುಗಳು, ಇಡೀ ವಾತಾವರಣವೇ ಉತ್ತಮವಾಗಿರಬೇಕೆಂದು ಸಹ ಪ್ರಚಾರ ಮಾಡಲು, ವಿಜ್ಞಾನಿಗಳ ಹಾಗೂ ಸರಕಾರಗಳ ಮನಃಪರಿವರ್ತನೆಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ದೂರದ ಆಫ್ರಿಕದಲ್ಲಿ ಚಿಂಪಾಂಜಿಗಳ ಮನೆಯನ್ನು ರಕ್ಷಿಸುವ ಪ್ರಯತ್ನವನ್ನು ನಡೆಸುತ್ತಲೇ, ಮುಂದುವರಿದ ರಾಷ್ಟ್ರಗಳಾದ ಅಮೆರಿಕಾ, ಯೂರೋಪ್‌ಗಳಲ್ಲಿ ಅವುಗಳನ್ನು ಪ್ರೀತಿಸುವ, ನಮ್ಮ ಒಡನಾಡಿಗಳಂತೆ ಕಾಣುವ ಮನೋಭಾವವನ್ನು ಬೆಳೆಸುವ ಪ್ರಯತ್ನಗಳು ನಡೆಯುತ್ತಿವೆ.

ಜೇನ್ ಗುಡಾಲ್‌ರ ಗಾಂಬೆ ಕೇಂದ್ರದಲ್ಲಿ ಅನೇಕ ಮಂದಿ ಸಂಶೋಧನಾ ವಿದ್ಯಾರ್ಥಿಗಳು ಚಿಂಪಾಂಜಿಗಳ ಜೀವನ ಕ್ರಮವನ್ನು, ವರ್ತನೆಯನ್ನು ಆಮೂಲಾಗ್ರವಾಗಿ ಅಭ್ಯಸಿಸಿದ್ದಾರೆ. ಜೇನ್ ಗುಡಾಲ್ ಇಂದು ತನ್ನ ಜೇನ್ ಗುಡಾಲ್ ಇನ್‌ಸ್ಟಿಟ್ಯೂಟ್‌ಗಾಗಿ ಹಣ ಸಂಗ್ರಹಣೆ ಮಾಡುತ್ತಿದ್ದಾರೆ. ಇದಕ್ಕಾಗಿ ದೇಶವಿದೇಶಗಳನ್ನು ಸುತ್ತುತ್ತಿದ್ದಾರೆ. ಈ ಹಣವು ನೂರಾರು, ಸಾವಿರಾರು ಅನಾಥ ಚಿಂಪಾಂಜಿಗಳ ರಕ್ಷಣೆ ಮತ್ತು ಸಾಕುವಿಕೆಗಾಗಿ ಖರ್ಚು ಮಾಡಲಾಗುತ್ತಿದೆ. ಇದಕ್ಕಾಗಿಯೇ ಸುಮಾರು 25 ಆಫ್ರಿಕನ್ನರನ್ನು ತರಬೇತಿಗೊಳಿಸಲಾಗಿದೆ. ಇದಲ್ಲದೆ ಆಫ್ರಿಕಾದ ಮಕ್ಕಳಲ್ಲಿ ಒಂದು ಜಾಗೃತಿ ಮೂಡಿಸಲು ಜೇನ್ ಗುಡಾಲ್ Roots & Shoots ಎಂಬ ಮಕ್ಕಳ ಸಂಘವನ್ನು ಆರಂಭಿಸಿದರು. ನಂತರ ಈ ಸಂಘವು ಅಮೆರಿಕಾ, ಜಪಾನ್, ಕೆನಡಾ, ಜರ್ಮನಿ, ಮತ್ತಿತರ 20 ದೇಶಗಳ ಪ್ರಾಣಿಪ್ರಿಯ ಮಕ್ಕಳನ್ನು ಕೈಬೀಸಿ ಕರೆಯಿತು. ಹೀಗಾಗಿ ಇಂದು ಈ ಸಂಘವು 250 ಗುಂಪುಗಳಲ್ಲಿ ಕೆಲಸ ಮಾಡುತ್ತಿದೆ. ಎಷ್ಟೋ ಮಕ್ಕಳಿಗೆ, ಮುದುಕರಿಗೆ, ಹಿರಿಯರಿಗೆ, ವಿದ್ಯಾರ್ಥಿಗಳಿಗೆ, ಪ್ರಕೃತಿಪ್ರಿಯರಿಗೆ ಜೇನ್ ಗುಡಾಲ್ ಒಬ್ಬ ಅದ್ಭುತ ವ್ಯಕ್ತಿ; ಹೀರೋ; ಮತ್ತು ಮುಂದಾಳು.

ಜೇನ್ ಗುಡಾಲ್ ಬದುಕಿರುವಾಗಲೇ ಒಂದು ದಂತಕಥೆಯಾಗಿದ್ದಾರೆ. ಆಕೆಯು ನಮಗೆಲ್ಲರಿಗೂ ಹೇಳುವ ಮಾತು ಒಂದೇ :–"ನೀವು ಎಲ್ಲೇ ಇರಿ. ನಿಮ್ಮ ಹೃದಯವನ್ನು ತೆರೆದಿಡಿ. ಮನಸ್ಸನ್ನು ಬಚ್ಚಿಡಿ; ಸುತ್ತಲೂ ಇರುವ ಈ ಕಪ್ಪು ಕಂಗಳಲ್ಲಿ ಹೆಪ್ಪುಗಟ್ಟಿರುವ ಭಯ, ನೋವನ್ನು ಅರ್ಥಮಾಡಿಕೊಳ್ಳಿ; ನಿಮ್ಮ ಭಾವನೆಗಳಿಗನುಸಾರವಾಗಿ ಪ್ರತಿಸ್ಪಂದಿಸಿ — ಅವುಗಳನ್ನು ನಿಮ್ಮಂತೆಯೇ ಪ್ರೀತಿಸಿ".

ಜೇನ್ ಗುಡಾಲ್ ಮೂವತ್ತು ವರ್ಷಗಳು ಕೊಟ್ಟ ಆ ಪ್ರೀತಿಯಲ್ಲಿ ಒಂದಿಷ್ಟು ಭಾಗವಾದರೂ ನಮಗೆ ಕೊಡಲು ಸಾಧ್ಯವಾಗುತ್ತದಲ್ಲವೇ ?

●

ಅಭಿನಂದನೆ

★ ಪ್ರತಿಷ್ಠಿತ 'ನಂಜನಗೂಡು ತಿರುಮಲಾಂಬ ಪ್ರಶಸ್ತಿ' ಪಡೆದ ಬಂಗಾಳಿ ಲೇಖಿಕಿ ಶ್ರೀಮತಿ ಸುಚಿತ್ರಾ ಭಟ್ಟಾಚಾರ್ಯರವರಿಗೆ,

★ 'ಸದೋದಿತಾ ಸಾಹಿತ್ಯ ಪ್ರಶಸ್ತಿ' ಪಡೆದ ಡಾ॥ ಸಿ. ಅನ್ನಪೂರ್ಣಮ್ಮ ಮತ್ತು ಡಾ॥ ಶಾಲಿನಿ ರಘುನಾಥ್‌ರವರಿಗೆ,

★ 'ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ' ಪಡೆದ ಸುಮಂಗಲಿ ಸೇವಾಶ್ರಮದ ಅಧ್ಯಕ್ಷೆ ಶ್ರೀಮತಿ ಎಸ್. ಜಿ. ಸುಶೀಲಮ್ಮನವರಿಗೆ,

★ 'ಗಾರ್ಗಿ ಪ್ರಶಸ್ತಿ' ಪಡೆದ ಶ್ರೀಮತಿ ಮೃಣಾಲಿನಿ ಶರತ್‌ಚಂದ್ರರವರಿಗೆ.

ಯುವ ಜನಾಂಗ ಮತ್ತು ಟಿ.ವಿ.

★ ಎಚ್. ಎಸ್. ಪಾರ್ವತಿ

ಮನುಷ್ಯ ಮಾತು ಕಲಿಯುವ ಮುಂಚೆ ಕುಣಿಯುವುದನ್ನು ಹಾಡುವುದನ್ನು ಕಲಿತ ಎಂಬುದು ಸಮಾಜ ಶಾಸ್ತ್ರದ ಹೇಳಿಕೆ. ಇದನ್ನು ಸಮರ್ಥಿಸಲು ಬಹಳ ದೂರ ಹೋಗಬೇಕಿಲ್ಲ. ಬೆಳೆಯುತ್ತಿರುವ ಒಂದು ಮಗು ಮಾತನಾಡಲು ಕಲಿಯುವ ಮುಂಚೆಯೇ 'ಆ' ಎಂದು ರಾಗ ತೆಗೆಯುತ್ತದೆ. ತಾಯಿಯ ಹಾಡಿಗೆ ಕಿವಿ ಕೊಡುತ್ತದೆ. ಸ್ವಲ್ಪ ನಿಲ್ಲುವ ಹಾಗಾದ ಕೂಡಲೇ ತಕ-ಥೈ ಎಂದು ಕುಣಿಯುತ್ತದೆ. ಅಂದರೆ, ಮನುಷ್ಯನಿಗೆ ಆಹಾರ ಸೇವನೆಯಷ್ಟೇ ಮನರಂಜನೆಯೂ ಆವಶ್ಯಕ ಎನ್ನುವ ಮಾತಿಗೆ ಎರಡನೆಯ ಅಭಿಪ್ರಾಯ ಇಲ್ಲ.

ಈ ಮನರಂಜನೆಯ ರೂಪಗಳು ಮಾತ್ರ ಅನೇಕ. ಒಂದು ಮಾತಿನಲ್ಲಿ ಹೇಳುವುದಾದರೆ ವಿಶ್ವದ ಎಲ್ಲ ಕಲೆ, ಸಾಹಿತ್ಯ, ಕ್ರೀಡೆಗಳಿಗೆ ಉಗಮಸ್ಥಾನಮನುಷ್ಯನ ಮನರಂಜನೆಯ ಪ್ರವೃತ್ತಿಯೇ. ಹೆಚ್ಚಿನ ಮನರಂಜನೆಯ ಸಾಧನಗಳು ಮನೋವಿಕಾಸ, ಶರೀರವಿಕಾಸಕ್ಕೆ ಎಡೆ ಮಾಡಿಕೊಡುತ್ತವೆ. ಕೆಲವೊಂದು ಮನರಂಜನೆ ಕೇವಲ ಹವ್ಯಾಸವಾಗಿ ಹೊತ್ತು ಕಳೆಯುವುದಕ್ಕಷ್ಟೇ ಸೀಮಿತವಾಗಲೂಬಹುದು.

ಓದುವ ಹವ್ಯಾಸ ಒಂದನ್ನು ಬಿಟ್ಟರೆ ಮಿಕ್ಕ ಎಲ್ಲ ಮನರಂಜನೆಯ ಮಾಧ್ಯಮಗಳಲ್ಲೂ ಒಂದು ಸಾಮಾನ್ಯ ವಿಷಯ ಇರುವುದನ್ನು ಗಮನಿಸಬೇಕು. ಈ ಎಲ್ಲ ಸಂದರ್ಭಗಳಲ್ಲೂ ಜನ ಒಟ್ಟಾಗಿ ಒಂದು ಕಡೆ ಸೇರಬೇಕು. ಆಟವಂತೂ ಸರಿಯೇ ಸರಿ; ನಾಟಕವಾಗಲೀ, ಸಂಗೀತವಾಗಲೀ, ಹರಿಕತೆಯಾಗಲೀ ದಿನದ ಸ್ವಲ್ಪ ಹೊತ್ತಾದರೂ ಜನ ಒಟ್ಟಿಗೆ ಕಲೆತು, ಮನರಂಜನೆಯನ್ನು ಪಡೆಯುವುದರ ಜೊತೆಗೇ ಪರಸ್ಪರ ಕಷ್ಟ ಸುಖ ವಿಚಾರಿಸಿಕೊಳ್ಳುವ ಆ ಮೂಲಕ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವ ಅಭ್ಯಾಸ ಮೊನ್ನೆ ಮೊನ್ನೆಯವರೆಗೆ ರೂಢಿಯಲ್ಲಿತ್ತು. ಅಂದರೆ ಈ ಮಾಧ್ಯಮಗಳು ಮನರಂಜನೆಯೊಂದಿಗೆ ಜನಸಂಪರ್ಕದ ಸಾಧನಗಳೂ ಆಗಿದ್ದವು.

ಈ ಶತಮಾನದ ಕೊಡುಗೆಯಾಗಿ ಎಲೆಕ್ಟ್ರಾನಿಕ್ ಮಾಧ್ಯಮಗಳು ಮನರಂಜನೆಯ ಸಾಧನಗಳಾದ ಮೇಲೆ ಒಮ್ಮೆಲೇ ಪರಿಸ್ಥಿತಿ ಬದಲಾಯಿತು. ಮನರಂಜನೆಗೆಂದು ಜನ ಮನೆ ಬಿಟ್ಟು ಹೋಗುವುದು ತಪ್ಪಿ, ಮನರಂಜನೆ ಮನೆ ಬಾಗಿಲಿಗೇ ಬರುವಂತಾಯಿತು. ಸಂಗೀತಪ್ರಿಯರಿಗೆ ರೇಡಿಯೋ ಮೂಲಕ ಕುಳಿತಲ್ಲೇ ಸಂಗೀತ ಕೇಳುವ ಸೌಲಭ್ಯ, ದೂರದರ್ಶನ ಬಂದ ಮೇಲಂತೂ ಒಂದಾದ ಮೇಲೊಂದರಂತೆ ಕಾರ್ಯಕ್ರಮ ನೋಡುತ್ತಿದ್ದರೆ ಹೊತ್ತು ಸರಿದದ್ದೇ ತಿಳಿಯುವುದಿಲ್ಲ. ಇಂಥ ಸಂದರ್ಭದಲ್ಲಿ ವಾಹನಗಳಿಗಾಗಿ ಪರಿದಾಡುತ್ತ ಮನೆಯಿಂದ ಹೊರಗಡೆ ಹೋಗಿ ನಾಲ್ಕು ಜನರ ಮಧ್ಯೆ ಕೂತು ಮನರಂಜನೆ ಪಡೆಯುವ ಅಗತ್ಯವೇನು. ಟಿ.ವಿ.ಯ ಸ್ವಿಚ್ ಒತ್ತಿದರೆ ಸಾಕು ಯಾವ ತೊಂದರೆಯೂ ಇಲ್ಲದೆ ಇದಿರಿಗೆ ಕಾಣುವುದಕ್ಕಿಂತ ಸ್ಪಷ್ಟವಾಗಿ ಆಟ ನೋಡಬಹುದು. ಅಂದಮೇಲೆ ಬಿಸಿಲು, ಧೂಳನ್ನು ಅನುಭವಿಸುತ್ತ ಮೈದಾನಕ್ಕೆ ಹೋಗುವ ತೊಂದರೆ ಏಕೆ? ಹಿಂದೆ ಪುಸ್ತಕ ಜೀವಿಗಳು ಮಾತ್ರ ಜನರೊಡನೆ ಮಾತನಾಡುವ ಆಸಕ್ತಿಯಿಲ್ಲದ ಮುಖ ಹೇಡಿಗಳು ಎನ್ನುವ ಬಿರುದಿಗೆ ಪಾತ್ರರಾಗಿದ್ದರೆ ಈಗ ಯಾರಿಗೂ ಜನಸಂಪರ್ಕವೇ ಬೇಡ. ತೀರಾ ಒಂದೇ ಕಡೆ ಕೂತು ಕಾಲಿನ ಕೀಲುಗಳು ಹಿಡಿದುಕೊಳ್ಳುತ್ತವೇ ಎನ್ನಿಸಿದಾಗ ಒಂದು ಸುತ್ತು ಹೋಗಿ ಬಂದರೆ ಮುಗಿಯಿತು. ಹೀಗೆ ಜನಸಂಪರ್ಕವನ್ನು ಕಡಿದು ಹಾಕುವುದರಲ್ಲಿ ಸಫಲವಾದ ಈ ಮಾಧ್ಯಮಗಳು ಯುವ ಜನಾಂಗವನ್ನೂ ಒಂದು ಕಡೆ ಮುದುರಿಕೊಳ್ಳುವಂತೆ ಮಾಡಿರುವುದೇ ದುರಂತ.

ದೃಶ್ಯ ಮಾಧ್ಯಮ ಮಿಕ್ಕೆಲ್ಲ ಮಾಧ್ಯಮಗಳಿಗಿಂತ ಪ್ರಭಾವಶಾಲಿ ಎನ್ನುವುದರಲ್ಲಿ ಸಂಶಯವೇ ಇಲ್ಲ. ಸಿನಿಮಾ ನೋಡಲು ಥಿಯೇಟರಿನವರೆಗೆ ಹೋಗುವ, ಖರ್ಚು ಮಾಡದೆ ಈ ಮಾಧ್ಯಮದ ಫಲವನ್ನು ಪಡೆಯುವಂತೆ ಮಾಡಿದೆ ದೂರದರ್ಶನ. ಸರಕಾರದ ನಿಯಂತ್ರಣಕ್ಕೊಳಪಟ್ಟ ಮುಖ್ಯ ಚಾನಲ್ ಅಲ್ಲದೆ, ಕೇಬಲ್‌ಗಳ ಮೂಲಕ ವಿಭಿನ್ನ ಕೇಂದ್ರಗಳು ತಮಗೆ

ಇಷ್ಟ ಬಂದ, ಜನರು ಆಕರ್ಷಿತರಾಗಬಹುದಾದ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿದೆ. ಹಾಗೆಯೇ ಜನರ ಅರಿವಿಗೇ ಅವರ ಮನಸ್ಸಿನ ಮೇಲೆ ಸಾಕಷ್ಟು ಪ್ರಭಾವವನ್ನೂ ಬೀರುತ್ತಿದೆ.

ಒಂದು ವಾದದ ಪ್ರಕಾರ "ಎಂಥ ಪ್ರಭಾವಶಾಲಿ ಮಾಧ್ಯಮವಾಗಲೀ ಅದನ್ನು ನೋಡಿಕೊಂಡು ಜನ ಅಪರಾಧ ಮಾಡುತ್ತಾರೆ, ದಾರಿ ಕೊಡುತ್ತಾರೆ ಎನ್ನುವ ಮಾತಿನಲ್ಲಿ ಹುರುಳಿಲ್ಲ, ಅಪರಾಧಿ ಪ್ರವೃತ್ತಿ ಎನ್ನುವುದು ಮನುಷ್ಯನಲ್ಲೇ ಇರುತ್ತದೆ. ಅವನು ಬೆಳೆಯುವ ಪರಿಸರ, ಸಹವಾಸ, ಅವಕಾಶ ಇವುಗಳಿಂದಾಗಿ ಆ ಪ್ರವೃತ್ತಿ ಮೇಲೆ ಕಾಣಿಸಿಕೊಳ್ಳುತ್ತದೆ. ಹಾಗಿಲ್ಲದಿದ್ದರೆ ಬರೀ ಒಳ್ಳೆಯದನ್ನೇ ಮಾಡಿಸಿ, ಬರೆದು ಇಡೀ ಮನುಷ್ಯ ಸಮಾಜವನ್ನು ಅಪರಾಧರಹಿತವನ್ನಾಗಿ ಮಾಡಿಬಿಡಬಹುದಾಗಿತ್ತು. ಜಾರತನ, ಚೋರತನ, ಮನುಷ್ಯನ ಪ್ರಕೃತಿಯಲ್ಲೇ ಬಂದಿರುವಂತಹುದು. ಸಾವಿರಾರು ವರ್ಷಗಳಿಂದ ರಾಮಾಯಣ, ಮಹಾಭಾರತಗಳನ್ನು ಕೇಳುತ್ತ ಬಂದಿದ್ದರೂ ಅದು ಕೇಳುವುದಕ್ಕಷ್ಟೇ ಆಗಿದೆಯೇ ಹೊರತು, ಕೀಚಕ, ರಾವಣರ ಸಂಖ್ಯೆಯೇನೂ ಕಡಿಮೆಯಾಗಿಲ್ಲ" ಎನ್ನುವುದು. ಈ ಮಾತು ಸತ್ಯವೇ ಇರಬಹುದಾದರೂ ಸ್ವಂತ ಅಭಿಪ್ರಾಯ ಸ್ಪಷ್ಟವಾಗಿ ರೂಪುಗೊಂಡಿರದ ಕಿಶೋರ ಮನಸ್ಸಿನ ಮೇಲೆ ದೃಶ್ಯ ಮಾಧ್ಯಮ ಗಾಢವಾದ ಪ್ರಭಾವ ಬೀರುತ್ತದೆ ಎನ್ನುವುದೇನೂ ಸುಳ್ಳಲ್ಲ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಕೆಲವು ಸಿನಿಮಾಗಳನ್ನು ನೋಡಿ 'ಪಿಕ್ ಪಾಕೆಟ್' ಮಾಡಿದೆ ಎನ್ನುವುದನ್ನು ಅನೇಕ ಜನ ಬಾಲಾಪರಾಧಿಗಳು ಒಪ್ಪಿಕೊಂಡಿದ್ದಾರೆ. ಜಾಹಿರಾತೊಂದನ್ನು ನೋಡಿ ಅದೇ ರೀತಿ ಮಾಡ ಹೋಗಿ ಪ್ರಾಣ ಒಪ್ಪಿಸಿದ ಒಬ್ಬ ಯುವಕನ ಕಥೆ ಮೊನ್ನೆ ಮೊನ್ನೆ ನಡೆದಿದೆ.

ಈ ದೃಶ್ಯ ಮಾಧ್ಯಮದಿಂದ ಕಿಶೋರ ವಯಸ್ಸಿನ ಮೇಲಾಗುವ ಪರಿಣಾಮಗಳ ದೊಡ್ಡ ಪಟ್ಟಿಯನ್ನು ಸಿದ್ಧಪಡಿಸಬಹುದು. ಉದಾಹರಣೆಗೆ ಹೇಳುವುದಾದರೆ :

1. ಸಾಹಸ ಪ್ರವೃತ್ತಿಯ ಹೆಸರಿನಲ್ಲಿ ಕಳ್ಳತನ, ದರೋಡೆ ಮುಂತಾದ ಅಸಾಮಾಜಿಕ ಚಟುವಟಿಕೆಗಳ ಕಡೆ ಸೆಳೆತ.
2. ಪ್ರಯೋಗಶೀಲತೆಯ ಹೆಸರಿನಲ್ಲಿ ಕೆಟ್ಟ ಚಟಗಳ ಅಭ್ಯಾಸ.
3. ಪ್ರೇಮದ ಹೆಸರಿನಲ್ಲಿ ಲೈಂಗಿಕತೆ ಮುಂತಾದವು.

ವೇಷಭೂಷಣಗಳ ಅನುಕರಣೆಯಂತೂ ಹೇಳುವುದೇ ಬೇಡ. ಇನ್ನು ಸಂಗೀತ, ನೃತ್ಯಗಳಿಗೆ ಬಂದಿರುವ ಸ್ಥಿತಿಯನ್ನು ಕಂಡರೆ, ಇದು ಹೀಗೇ ಮುಂದುವರಿದರೆ ಗತಿಯೇನು ? ನಮ್ಮ ಶಾಸ್ತ್ರೀಯ ಸಂಗೀತ, ನೃತ್ಯಗಳ ಕಾಲ ಮುಗಿದಂತೆಯೇ ಎನ್ನುವ ಚಿಂತೆಯಾಗುತ್ತದೆ.

ದೂರದರ್ಶನದಲ್ಲಿ ಚಿತ್ರಿತವಾಗಿರುವ ಮಹಿಳೆಯರ ಪಾತ್ರವನ್ನು ನೋಡಿದರಂತೂ, ಸಿನಿಮಾದಲ್ಲಿ ಮೂಡಿ ಬರುವ ಸ್ತ್ರೀ ಪಾತ್ರಕ್ಕಿಂತ ಯಾವ ರೀತಿಯಲ್ಲೂ ಭಿನ್ನವಾಗಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಸಮಾಜದಲ್ಲಿ ಒಂದೆರೆಡು ಹೆಜ್ಜೆಯಷ್ಟಾದರೂ ಮಹಿಳೆ ಬದಲಾಗಿರಬಹುದು. ಅವಳ ವಿಚಾರದಲ್ಲಿ ಬದಲಾವಣೆ ಬಂದಿರಬಹುದು. ಆದರೆ ದೂರದರ್ಶನದ ಧಾರಾವಾಹಿಗಳನ್ನು ನೋಡುತ್ತಿದ್ದರೆ ಈಗಲೂ ಅಲ್ಲಿನ ಹಳೇ ಮೌಲ್ಯದ ಪ್ರತಿಪಾದಕಳಾಗಿಯೇ ಚಿತ್ರಿತಳಾಗುತ್ತಿದ್ದಾಳೆ. ಸಂಸಾರಕ್ಕೋಸ್ಕರ ತ್ಯಾಗ, ತನ್ನ ತಪ್ಪಿಲ್ಲದಿದ್ದರೂ ಪತಿಯ ಕ್ಷಮೆ ಕೇಳುವುದು, ತಾಳಿಯ ಮಹಿಮೆಯ ವೈಭವೀಕರಣ, ಎಲ್ಲದಕ್ಕೂ ಕೊಡಗಟ್ಟಲೆ ಕಣ್ಣೀರು ಸುರಿಸುವುದು, ವಿಚಾರವಂತಿಕೆಯೇ ಇಲ್ಲದೆ ಪತಿಯನ್ನೋ, ಪುತ್ರನನ್ನೋ ಉಳಿಸಿಕೊಳ್ಳಲು ಪೋಲೀಸರ ಕಾಲು ಹಿಡಿಯುವುದು ಹೀಗೆ ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಎಲ್ಲ ಧಾರಾವಾಹಿಗಳಲ್ಲೂ ಸ್ತ್ರೀ ಪಾತ್ರ ಇರಲೇಬೇಕು, ಇರುತ್ತವೆ. ಆದರೆ ಅವರಿಗೊಂದು ವ್ಯಕ್ತಿತ್ವ ಇರುವ ಆವಶ್ಯಕತೆ ಇಲ್ಲವೆಂದೇ ನಿರ್ದೇಶಕರೂ, ನಿರ್ಮಾಪಕರೂ ನಿಶ್ಚಯಿಸಿಬಿಟ್ಟಿರುತ್ತಾರೆ. (ಇತ್ತೀಚೆಗೆ ಪ್ರಸಾರವಾದ ಎಲ್ಲ ಮರೆತಿರುವಾಗ ಮುಂತಾದವು ಇದಕ್ಕೆ ಅಪವಾದ)

ಈ ಗುಂಪಿನ ಪಾತ್ರಗಳನ್ನು ಬಿಟ್ಟರೆ ಜಗಳಗಂಟಿಯರು, ಮನೆ ಮುರುಕರು ಇಂಥ ಸ್ತ್ರೀ ಪಾತ್ರಗಳಿಗೇನೂ ಕೊರತೆಯಿಲ್ಲ. ಜೀವನವನ್ನು ಇದಿರಿಸುವ ಧೈರ್ಯವಂತ, ಬುದ್ಧಿವಂತ ಸ್ತ್ರೀ ಪಾತ್ರಗಳು ಸಾವಿರಕ್ಕೆ ಒಂದಿದ್ದರೆ ಹೆಚ್ಚು.

ಜಾಹಿರಾತಿಗೆ ಮಾತ್ರ ಹುಡುಗಿಯರೇ ಬೇಕು. ಗಂಡಸು ಉಪಯೋಗಿಸುವ ಬ್ಲೇಡ್, ಕ್ರೀಮುಗಳಿಗೂ

ಹೆಂಗಸೇ ಬೇಕು. ಕೆಲವೊಮ್ಮೆಯಂತೂ ಈ ಚಿತ್ರಣ ಅರ್ಥಹೀನವಾಗಿರುತ್ತದೆ.

ಇನ್ನು ಉದ್ಯೋಗಸ್ಥ ಮಹಿಳೆಯ ಪಾತ್ರಗಳ ಚಿತ್ರಣ : ನಮ್ಮ ನಿರ್ಮಾಪಕರ, ನಿರ್ದೇಶಕರ ದೃಷ್ಟಿಯಲ್ಲಿ ಉದ್ಯೋಗಸ್ಥ ಸ್ತ್ರೀ ಎಂದರೆ ಅವಳು ನೋಡುವವರ ಸಹಾನುಭೂತಿಗೆ ಪಾತ್ರಳು. ತವರು ಮನೆಯಲ್ಲಿ ತಮ್ಮ ತಂಗಿಯರ ಏಳಿಗೆಗಾಗಿ ದುಡಿಯುತ್ತ ಅವಿವಾಹಿತೆಯಾಗಿ ಉಳಿದು ಕೊನೆಯಲ್ಲಿ ಎಲ್ಲರಿಂದ ಪರಿತ್ಯಕ್ತೆಯಾಗುವುದು, ನೌಕರಿ ಮಾಡುವುದರಿಂದಲೇ ಗಂಡು ಸಿಗದೆ ಅವಿವಾಹಿತೆಯಾಗಿ ಉಳಿಯುವುದು, ಗಂಡನ ಮನೆಯಲ್ಲಿ ಮನೆಯ ಎಲ್ಲರ ಅವದೃಷ್ಟಿಗೆ ಪಾತ್ರಳಾಗುವುದು, ಪತಿಯ ಅಸೂಯೆಗೆ, ಅನುಮಾನಕ್ಕೆ ಕಾರಣವಾಗುವುದು ಹೀಗೆ ದುಡಿಯುವ ಸ್ತ್ರೀ ಎಂದರೆ ಒಂದು ಶೋಷಿತ ಪಾತ್ರ ಎನ್ನುವ ಭಾವನೆ ಬೆಳೆಯುವಂತೆಯೇ ಪಾತ್ರ ಪೋಷಣೆ ಮಾಡಲಾಗುತ್ತದೆ. ಇಲ್ಲದಿದ್ದರೆ ಇದಕ್ಕೆ ವ್ಯತಿರಿಕ್ತವಾಗಿ ಕೆಲಸ ಮಾಡುವ ಹೆಣ್ಣು ತನ್ನ ಗಳಿಕೆಯ ಕಾರಣದಿಂದ, ಅಹಂಕಾರದಿಂದ ಮನೆಯವರನ್ನೆಲ್ಲ ನಿಕೃಷ್ಟಳನ್ನಾಗಿ ಕಾಣುವುದು, ಹಿರಿಯರ, ಪತಿಯ ಅವಹೇಳನ ಮಾಡುವುದು, ಸ್ವೇಚ್ಛೆಯಿಂದ ವರ್ತಿಸುವುದು ನಮ್ಮ ದೂರದರ್ಶನ ಧಾರಾವಾಹಿ ನಿರ್ಮಾಪಕರ ದುಡಿಯುವ ಸ್ತ್ರೀಯ ಚಿತ್ರಣ. ಉದ್ಯೋಗ ಮಾಡುವುದರಿಂದ ಒಬ್ಬ ಮಹಿಳೆಯಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ, ಕಷ್ಟಗಳನ್ನು ಇದಿರಿಸುವ ಧೈರ್ಯ ಬರುತ್ತದೆ, ಜೊತೆಗೇ ವ್ಯವಹಾರ ಜ್ಞಾನ, ಚುರುಕುತನ ಅವಳಲ್ಲಿ ಬೆಳೆಯುತ್ತವೆ. ಒಟ್ಟಿನಲ್ಲಿ ಸರಿಯಾದ ಅರ್ಥದಲ್ಲಿ ಅವಳೊಬ್ಬ ಸತ್ಪ್ರಜೆಯಾಗಿ ಬೆಳೆಯುತ್ತಾಳೆ ಎನ್ನುವುದು ಈ ಟೆಲಿ ಕಾರ್ಯಕ್ರಮದ ನಿರ್ದೇಶಕರಿಗೆ ಅರ್ಥವೇ ಆಗಿಲ್ಲವೋ ಅಥವಾ ಜನಕ್ಕೆ ಇಂತಹ ಪಾತ್ರಗಳಿಂದ ಕಣ್ಣೀರು ಸುರಿಸುವ ಪಾತ್ರಗಳೇ ಹೆಚ್ಚು ಇಷ್ಟವಾಗುತ್ತವೆ ಎನ್ನುವ ಅಭಿಪ್ರಾಯವೋ ತಿಳಿಯದು. ಅಪರೂಪಕ್ಕೆ ಕೆಲವೊಂದು ಒಳ್ಳೆಯ ಪಾತ್ರಗಳೂ ಬಂದಿರಬಹುದು. ಟಿ.ವಿ. ಕಾರ್ಯಕ್ರಮಗಳನ್ನು ವಿಮರ್ಶಿಸುವವರಿಗೂ ಇದೊಂದು ಕೊರತೆ ಎನ್ನಿಸದಿರುವುದು ಆಶ್ಚರ್ಯ! ಉದ್ಯೋಗಸ್ಥೆಯ ಈ ಇನ್ನೊಂದು ಮಗ್ಗುಲು ಬಹುಶಃ ಅವರಿಗೂ ಇಷ್ಟವಿಲ್ಲವೇನೋ!

ಸ್ತ್ರೀಯ ವ್ಯಕ್ತಿತ್ವ ವಿಕಾಸಕ್ಕೆ ಅಡ್ಡಿಯಾಗುವ, ಅವಳ ಆತ್ಮವಿಶ್ವಾಸವನ್ನು ಕುಂದಿಸುವ ಪಾತ್ರಗಳನ್ನು ಕಂಡಾಗಲೆಲ್ಲ ಖಂಡಿಸುವ ಪ್ರವೃತ್ತಿ ಬೆಳೆಯಬೇಕು. ಕೊನೆಯ ಪಕ್ಷ ಮಹಿಳಾ ಸಂಘಟನೆಗಳು ಈ ಕೆಲಸ ಕೈಗೆತ್ತಿಕೊಳ್ಳಬೇಕು. ಇಲ್ಲದಿದ್ದರೆ ಇಂತಹ ಚಿತ್ರಣಗಳನ್ನೇ ನೋಡಿ ನೋಡಿ ನಮ್ಮ ಯುವ ಜನಾಂಗದ ಮನಸ್ಸಿನಲ್ಲಿ ಸಂಪ್ರದಾಯವಾದಿ ಸ್ತ್ರೀಯರೇ ಆದರ್ಶ ಎನ್ನಿಸಿ, ಬುದ್ಧಿಜೀವಿ, ವಿಚಾರವಂತೆ ಮಹಿಳೆಯ ಬಗ್ಗೆ ಉದಾಸೀನ ಅಥವಾ ತಿರಸ್ಕಾರವೇ ಬೆಳೆದರೂ ಆಶ್ಚರ್ಯವಿಲ್ಲ.

ಇಷ್ಟೆಲ್ಲಾ ದೋಷಗಳಿರಬಹುದಾದರೂ ದೂರದರ್ಶನದ ಕಾರ್ಯಕ್ರಮದಿಂದ ಯುವ ಜನಾಂಗದ ಮೇಲೆ ಕೇವಲ ಕೆಟ್ಟ ಪ್ರಭಾವವೇ ಆಗುತ್ತದೇ ಎಂದರೆ ಅದು ಅರ್ಧ ಸತ್ಯ ಮಾತ್ರ ಆಗಿರುತ್ತದೆ. ಮಿಕ್ಕ ಎಲ್ಲ ವೈಜ್ಞಾನಿಕ ಅನ್ವೇಷಣೆಗಳಂತೆ ಇದೂ ಕೂಡಾ ಹರಿತವಾದ ಕತ್ತಿಯಂತೆ. ಕತ್ತಿಯಿಂದ ಕೈಯ್ಯನ್ನೂ ಕತ್ತರಿಸಬಹುದು, ಹಣ್ಣನ್ನೂ ಕತ್ತರಿಸಬಹುದು. ಉಪಯೋಗಿಸುವವರ ಮನೋಭಾವಕ್ಕೆ ತಕ್ಕಂತೆ ಕತ್ತಿಯ ಉಪಯೋಗ.

ದೂರದರ್ಶನದ ಉಪಯೋಗಗಳೂ ಲೆಕ್ಕವಿಲ್ಲದಷ್ಟು. ಅದರಲ್ಲೂ ಶಿಕ್ಷಣದ ವಿಚಾರದಲ್ಲಿ ಇದೊಂದು ವರವೇ ಸರಿ. ವಿಶ್ವದ ಎಲ್ಲ ದೇಶಗಳ ಪ್ರಾಣಿ, ಪಕ್ಷಿ ವೈವಿಧ್ಯ, ಜೀವನದ ರೀತಿ, ಸಂಸ್ಕೃತಿ, ಸಂಪ್ರದಾಯಗಳನ್ನು ದೂರದರ್ಶನದ ಮೂಲಕ ಕಂಡಾಗ ಅದು ಯುವಕರ ಮನಸ್ಸಿನಲ್ಲಿ ಅಚ್ಚೊತ್ತುತ್ತದೆ. ಗಂಟೆಗಟ್ಟಲೆ ಕೇಳಿದ ಭಾಷಣಕ್ಕಿಂತ, ಮನಸ್ಸನ್ನು ಕೇಂದ್ರೀಕರಿಸಿ ಓದುವ ಪುಸ್ತಕಕ್ಕಿಂತ ಈ ದೃಶ್ಯ ಮಾಧ್ಯಮದಲ್ಲಿ ಪರಿಚಯ ಮಾಡಿಸುವ ಪಾಠಗಳು ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುತ್ತವೆ. ಅದಕ್ಕೆ ವಿದೇಶಗಳಲ್ಲಿಯ ರೇಖಾ ಗಣಿತ, ಬೀಜ ಗಣಿತದಂತಹ ವಿಷಯಗಳ ಬಗ್ಗೆಯೂ ಕ್ಯಾಸೆಟ್ ಬಂದಿವೆ. ಯಾವ ಮನೆಯ ಮೇಷ್ಟರ ಆವಶ್ಯಕತೆಯೂ ಇಲ್ಲದೆ ವಿದ್ಯಾರ್ಥಿಗಳಿಗೆ ಇವು ಪಾಠ ಹೇಳಿಕೊಡುತ್ತವೆ. (ಈಗ ನಮ್ಮ ಕೆಲವು ಕೇಂದ್ರಗಳಿಂದಲೂ ಈ ಪಾಠಗಳನ್ನು ನೋಡಬಹುದು) ಹೀಗೆಯೇ ಸಮಾಜ ಸುಧಾರಣೆಗೆ ಬೇಕಾದ ಎಲ್ಲ ವಿಷಯಗಳನ್ನೂ ದೂರದರ್ಶನದ ಮೂಲಕ ಪ್ರಭಾವಶಾಲಿಯಾಗಿ ಬಿತ್ತರಿಸಬಹುದು. ಜನ ಸಂಪರ್ಕಕ್ಕೆ ಕಾರಣ

ವಾಗಿದ್ದ ಮನರಂಜನೆಯ ಸಾಧನಗಳೂ ದೂರದರ್ಶನದಂತಹ ಮಾಧ್ಯಮಗಳಿಂದ ಜನರನ್ನು ಪರಸ್ಪರ ಅಪರಿಚಿತರನ್ನಾಗಿ ಮಾಡುತ್ತದೆ ಎನ್ನುವುದು ನಿಜವಾದರೂ ಮನರಂಜನೆಗೆಂದು ಖರ್ಚು ಮಾಡುವ ಹಣವನ್ನು ಇದು ಉಳಿಸುತ್ತದೆ ಎನ್ನುವುದೂ ಅಷ್ಟೇ ನಿಜ. ಭಾರತದಂತಹ ಬಡ ದೇಶಗಳಲ್ಲಂತೂ ಇದು ಅತಿ ಮುಖ್ಯ ವಿಚಾರ. ಒಮ್ಮೆ ದುಡ್ಡು ಹಾಕಿ ಟಿ.ವಿ. ತಂದಿಟ್ಟರೆ ಬೇಕಾದಷ್ಟು ಸಿನಿಮಾಗಳನ್ನು, ಧಾರಾವಾಹಿಗಳನ್ನು ಒಂದು ಕಾಸೂ ಖರ್ಚಿಲ್ಲದೆ ನೋಡಬಹುದು. 'ಅವಲೋಕನ' ಹಿಂದಿಯ 'ಸುರಭಿ' ಕಾರ್ಯಕ್ರಮದಿಂದ ನಮ್ಮ ನಾಡಿನ ಬಗ್ಗೆ ಕಲಾವಿದರ ಬಗ್ಗೆ ಬೇಕಾದಷ್ಟು ಮಾಹಿತಿ ಪಡೆಯಬಹುದು. ಹಿಂದಿಯ 'ಸರಿಗಮ'ದಂತಹ ಕಾರ್ಯಕ್ರಮದಿಂದ ಯುವ ಪ್ರತಿಭೆಗಳು ಬೆಳಕಿಗೆ ಬರಲು ಸಹಕಾರಿಯಾಗಬಲ್ಲುದು. ಹಾಗೆಯೇ 'ಕ್ವಿಜ್'ನಂತಹ ಕಾರ್ಯಕ್ರಮಗಳು ಯುವ ಜನಾಂಗದ ಸಾಮಾನ್ಯ ಜ್ಞಾನ, ವಿಷಯ ಗ್ರಹಣ ಶಕ್ತಿಯ ಪರಿಚಯ ಆಗುತ್ತದೆ. ಹೀಗೆ ದೂರದರ್ಶನ ಕಾರ್ಯಕ್ರಮಗಳು ಯುವ ಜನಾಂಗದ ಮೇಲೆ ಒಳ್ಳೆಯ ಪ್ರಭಾವ ಬೀರಬಲ್ಲುದು ಎನ್ನುವುದಕ್ಕೂ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು.

ಯಾವ ಕಾನೂನಿನ ಮೂಲಕವೂ ಇಂತಹದೇ ದೃಶ್ಯಗಳನ್ನು ತೋರಿಸಿ ಎಂದು ನಿಯಮ ಹೇಳುವುದು ಸಾಧ್ಯವಿಲ್ಲ. ಒಳ್ಳೆಯ ವಾತಾವರಣದಲ್ಲಿ ಬೆಳೆದ ಮಕ್ಕಳು ಕೆಟ್ಟ ಕಾರ್ಯಕ್ರಮಗಳನ್ನು ನೋಡಿದರೂ ಅದರಿಂದ ಪ್ರಭಾವಿತರಾಗದೆ ಉಳಿಯುವುದು ಸಾಧ್ಯ. ●

ಓಡಿಹೋದ ಹೆಣ್ಣಿಗೆ ಶಿಕ್ಷೆ – ಗುಂಪು ಅತ್ಯಾಚಾರ

ಉತ್ತರ ಪ್ರದೇಶದ ಪುಣ್ಯಕ್ಷೇತ್ರ ಹರಿದ್ವಾರ ಜಿಲ್ಲೆಯ ಲಬೋಲಿ ಗ್ರಾಮ. ಇಪ್ಪತ್ತಾರು ವರ್ಷದ ದಲಿತ ವರ್ಗದ ಹೆಣ್ಣು ಮಿಥಿಲೇಶ್ ಮೂರು ಮಕ್ಕಳ ತಾಯಿ. ಈಕೆ ಮುಸ್ಲಿಮ್ ಯುವಕನೊಬ್ಬನಲ್ಲಿ ಅನುರಕ್ತಳಾದ ಅಪರಾಧಕ್ಕೆ ಆಕೆಯ ಜಿಲ್ಲಾ ಪಂಚಾಯತ್ ಘೋಷಿಸಿದ ಶಿಕ್ಷೆ—ಸಮೂಹ ಅತ್ಯಾಚಾರ. ಭಯದಲ್ಲಿ ಮಿಥಿಲೇಶ್ ತನ್ನ ಪ್ರಿಯಕರನೊಡನೆ ಮಕ್ಕಳನ್ನೂ ಕರೆದುಕೊಂಡು ಹಳ್ಳಿ ಬಿಟ್ಟು ಓಡಿಹೋದಳು. ಆಕೆಯನ್ನು ಸಂಬಂಧಿಕ 'ಕಾಲು' ಹಳ್ಳಿಗೆ ಹಿಂತಿರುಗಿ ಕರೆತಂದ. ಆಕೆಯ ಮೇಲೆ 'ಕಾಲು' ಸೇರಿದಂತೆ ಹದಿಮೂರು ಜನ ಜುಲೈ 13ರ ರಾತ್ರಿ ಸತತವಾಗಿ ಅತ್ಯಾಚಾರವೆಸಗಿ ಅವಳ 'ತಪ್ಪಿಗೆ ತಕ್ಕ ಶಿಕ್ಷೆ ವಿಧಿಸಿದರು'. ತನ್ನ ಆರು ವರ್ಷಕ್ಕಿಂತ ಚಿಕ್ಕ ವಯಸ್ಸಿನ ಮೂರು ಮಕ್ಕಳು, ಹತ್ತು ವರ್ಷದ ಮೈದುನ, ಗಂಡ, ಅತ್ತೆಯ ಎದುರಿನಲ್ಲಿ ತನ್ನದೇ ಮನೆಯಲ್ಲಿ ಮಿಥಿಲೇಶ್ ಅತ್ಯಾಚಾರಕ್ಕೆ ಒಳಗಾದಳು. ತನ್ನ ಪತ್ನಿಯ ಅವಸ್ಥೆಯನ್ನು ಕಂಡು ಕೂಗಿ ಗೋಳಿಟ್ಟ ಗಂಡ ಪೋಲೀಸರಿಗೆ ದೂರು ಕೊಡಲು ಹೊರಟಾಗ ಅವನನ್ನೂ ಹಿಡಿದು ಕೂಡಿಹಾಕಿದರು.

ಪಟ್ಟಣಗಳು ಕೆಟ್ಟುಹೋಗುತ್ತಿವೆ, ಹಳ್ಳಿಗಳಲ್ಲಿ ನಮ್ಮ ಭಾರತೀಯ ಸಂಸ್ಕೃತಿ ಉಸಿರಾಡುತ್ತಿದೆ ಎಂದು ಹೆಮ್ಮೆ ಪಡುವವರು, ನಮ್ಮ ಸಂಸ್ಕೃತಿಯ ಈ ವಿಕಾರ ಮುಖಗಳು ಎಂದಿಗೆ ನಶಿಸುತ್ತವೆ ಎಂದು ಕಾಯಬೇಕು. ಒಂದು ಹೆಣ್ಣು ಯಾರನ್ನು ಪ್ರೀತಿಸಬೇಕು, ಯಾರೊಡನೆ ಮಲಗಬೇಕು ಎಂಬುದೂ ಪಂಚಾಯತ್ ಗಂಡಸರ ನಿರ್ಣಯವಾದಂತಿದೆ. ಅವರ ಇಚ್ಛೆ ಇಂಗಿತ, ಮೂಗಿನ ನೇರದ 'ಬಿರಾದರಿ'ಯ ಮರ್ಯಾದೆಯ ಹೊರಗೆ ಕಾಲಿಟ್ಟ ಹೆಣ್ಣು ಈ 'ಮರ್ಯಾದಸ್ಥ' ನ್ಯಾಯ ನಿರ್ಣಯಕರ ಅತ್ಯಾಚಾರಕ್ಕೆ ಒಳಗಾಗಬೇಕು. ಹತ್ತು ಹೆಂಗಸರನ್ನು ಕಟ್ಟಿಕೊಂಡರೂ, ಇಟ್ಟುಕೊಂಡರೂ ಗಂಡಸು ಪೌರುಷದಿಂದ ತಲೆಯೆತ್ತಿ ಮೆರೆಯಬಲ್ಲ. ಸಮಾಜದಲ್ಲಿ ಓರ್ವ ಹೆಣ್ಣಿಗೆ ತನ್ನ ಮನಸ್ಸಿಗೆ ಒಪ್ಪಿದ ಗಂಡನ್ನು ಪ್ರೀತಿಸುವ ಸ್ವಾತಂತ್ರ್ಯವೂ ಇಲ್ಲ. ಗಂಡನೇ ಹೆಂಡತಿಯನ್ನು ಕ್ಷಮಿಸಿದ್ದರೂ, ಆಕೆಯ ಪ್ರೇಮ ವ್ಯವಹಾರದ ಬಗ್ಗೆ ದೂರು ನೀಡದಿದ್ದರೂ, ಈ ಪಂಚರು ಬಿಡರು, ಇವರ ಕಾಮದಾಹಕ್ಕೆ ಹೆಣ್ಣು ನೆಪವಾಗಿದ್ದಾಳೆ.

ಸಾಮೂಹಿಕ ಅತ್ಯಾಚಾರಕ್ಕೆ ತುತ್ತಾದ ಮಿಥಿಲೇಶ್ ಈಗಲೂ ರೂರ್ಕಿ ಸಿವಿಲ್ ಆಸ್ಪತ್ರೆಯಲ್ಲಿ ಸಾವು ಬದುಕಿನೊಡನೆ ಸೆಣಸಾಡುತ್ತಿದ್ದಾಳೆ. ನುಚ್ಚುನೂರಾದ ಇಡೀ ದೇಹ ನೋವಿನ ಸಾಗರವಾಗಿ ಅವಳನ್ನು ಹಿಂಡುತ್ತಿದೆ. ಹಳ್ಳಿಗಳ ಪುರುಷ ಪ್ರಧಾನ ವ್ಯವಸ್ಥೆಯ ಅತಿರೇಕಗಳನ್ನು ತಡೆಗಟ್ಟಲು ದೊಡ್ಡ ಹೋರಾಟವೇ ಬೇಕಾಗಿದೆ.

ಶ್ರದ್ಧಾಂಜಲಿ

ದಿಟ್ಟತನದ ಪ್ರತೀಕವಾಗಿದ್ದ ಅರುಣಾ

★ ಜಿ. ರಾಮಕೃಷ್ಣ

ಈ ಬಾರಿ ಅರುಣಾ ಅಸಫ್ ಆಲಿಯವರು ಆಸ್ಪತ್ರೆ ಸೇರಿದಾಗ ಬರಲಾರಂಭಿಸಿದ ವರದಿಗಳು ಇನ್ನು ಆಕೆ ಉಳಿಯಲಾರಳೆಂಬ ಭಾವನೆ ಮೂಡಿಸಿದ್ದುವು. ಮೊದಲು ಒಂದು ವಾರ ಆಸ್ಪತ್ರೆಯಲ್ಲಿದ್ದು ಹೊರಬಂದಿದ್ದ ಅವರು ಮೂರು ದಿನಗಳಲ್ಲಿ ಮತ್ತೆ ಆಸ್ಪತ್ರೆ ಸೇರಬೇಕಾಗಿ ಬಂತು. ನಂತರ ಉಸಿರಾಟಕ್ಕೆ ತೊಂದರೆ, ಕುಸಿದ ರಕ್ತದೊತ್ತಡ, ಪ್ರಜ್ಞಾಹೀನತೆ, ಇವುಗಳಿಂದ ಬಳಲಿ ಕಡೆಗೆ ಇದೇ ಜುಲೈ 29ರಂದು ಸೋಮವಾರ ಅಪರಾಹ್ನ 3-45ಕ್ಕೆ ಕೊನೆಯುಸಿರೆಳೆದರು. ಇದರಿಂದ ಇಂದು ಅಪೂರ್ವ ಜೀವ ನಮ್ಮ ನಡುವಿನಿಂದ ಹಾರಿದಂತೆ ಆಯಿತೆಂದು ಲಕ್ಷಗಟ್ಟಲೆ ಭಾರತೀಯರು ಕಂಬನಿಗರೆದರು. ಸಹಜವಾಗಿಯೇ 'ಅಚಲ'ದ ಬಳಗ ತನ್ನ ದುಃಖವನ್ನು ಪ್ರಕಟಿಸುತ್ತಾ ಆ ಮಹಾನ್ ವ್ಯಕ್ತಿಗೆ ಗೌರವ ಸೂಚಿಸುತ್ತದೆ.

ಮೊದಲಿನಿಂದಲೂ ಈಕೆಯದು ಕೃಶ ದೇಹ; ಆದರೆ ಕೆಚ್ಚೆದೆಯ ಸಾಹಸಗಳಿಗೆ ಮತ್ತು ದಿಟ್ಟತನದ ಜೀವನಕ್ಕೆ ಈಕೆ ಅಪ್ರತಿಮಳೆಂಬ ಖ್ಯಾತಿ ಹೊಂದಿದ್ದಾರೆ. 1930-40ರ ದಶಕಗಳಲ್ಲಿ ಬಾವುಟ ಮತ್ತು ಬಾಂಬುಗಳನ್ನು ಹಿಡಿದಿದ್ದ ಆಕೆಯ ಕೈಗಳು 60ರ ದಶಕದಿಂದಾಚೆಗೆ ಲೇಖನಿಯನ್ನು ಹಿಡಿದು ಪ್ರಬಲವಾದ ಪ್ರಭಾವವನ್ನು ಮೆರೆದಿದ್ದವು. ಸಣ್ಣತನವನ್ನು ಯಾವ ಕ್ಷೇತ್ರದಲ್ಲೂ ಪ್ರದರ್ಶಿಸದೆ ಮೇರು ವ್ಯಕ್ತಿಯಾಗಿ ಜೀವಿಸಿದ ಅರುಣಾ ದೃಢತೆಗೆ ಪ್ರತೀಕವಾಗಿದ್ದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿಸ್ಪೃಹರಾಗಿ ಭಾಗವಹಿಸಿದ ಸಹಸ್ರಾರು ಸಾಮಾನ್ಯ ಮಹಿಳೆಯರಲ್ಲಿ ಅಸಾಮಾನ್ಯ ಕೀರ್ತಿಗೆ ಪಾತ್ರರಾಗಿರುವವರು ಹಲವರಿದ್ದಾರೆ. ಅವರಲ್ಲಿ ಕಿರೀಟಪ್ರಾಯವಾಗಿ ಕಂಗೊಳಿಸಿದವರು ಇಬ್ಬರು: ಕಲ್ಪನಾ ದತ್ ಮತ್ತು ಅರುಣಾ ಬ್ಯಾನರ್ಜಿ; ಅಥವಾ ಹೆಚ್ಚು ಪ್ರಚಲಿತವಾಗಿರುವಂತೆ ಕಲ್ಪನಾ ಜೋಶಿ ಮತ್ತು ಅರುಣಾ ಅಸಫ್ ಆಲಿ. ಕಲ್ಪನಾ ತಮ್ಮ ಹದಿನೇಳನೆಯ ವಯಸ್ಸಿನಲ್ಲಿ ಚಿತ್ತಗಾಂಗ್ ಮಿಲಿಟರಿ ಶಸ್ತ್ರಾಸ್ತ್ರಗಳ ದಾಸ್ತಾನು ಮಳಿಗೆಗಳಿಗೆ ಮುತ್ತಿಗೆ ಹಾಕಿದ್ದವರು; ಕೆಲವು ವರ್ಷಗಳ ಹಿಂದೆ ತಮ್ಮ 87ನೆಯ ವಯಸ್ಸಿನಲ್ಲಿ ತೀರಿಕೊಂಡವರು. ಅರುಣಾ ತಮ್ಮ ಹತ್ತೊಂಭತ್ತನೆಯ ವಯಸ್ಸಿನಲ್ಲಿ ಸ್ವಾತಂತ್ರ್ಯದ ಹೋರಾಟಕ್ಕೆ ಧುಮುಕಿದವರು; ಹತ್ತಾರು ಹೆಗ್ಗಳಿಕೆಗಳನ್ನು ತಮ್ಮದಾಗಿಸಿಕೊಂಡು ತಮ್ಮ 88ನೆಯ ವಯಸ್ಸಿನಲ್ಲಿ ಮೊನ್ನೆ ತೀರಿಕೊಂಡವರು. ಈ ಎರಡು ಉಜ್ವಲ ನಕ್ಷತ್ರಗಳು ನಮ್ಮ ಸಮಕಾಲೀನ ಭಾರತೀಯ ಮಹಿಳೆಯರ ಸಮುದಾಯದಲ್ಲಿ ಚಿರಂತನವಾಗಿ ಪ್ರಕಾಶಿಸುತ್ತಿರುತ್ತವೆ.

1909ರ ಜುಲೈ 16ರಂದು ಆಗಿನ ಪಂಜಾಬ್‌ಗೆ ಸೇರಿದ್ದ ಕಾಲ್ಕಾದಲ್ಲಿ ಜನಿಸಿದ ಅರುಣಾ ಬ್ರಾಹ್ಮ ಸಮಾಜದ ಒಂದು ಕುಟುಂಬಕ್ಕೆ ಸೇರಿದ್ದರು; ಅದು ರವೀಂದ್ರನಾಥ ಠಾಕೂರರಿಗೆ ದೂರ ಸಂಬಂಧಿ ಕುಟುಂಬವೆಂದು ಹೇಳುತ್ತಾರೆ. ತಮ್ಮಂತೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದ ಅಸಫ್ ಆಲಿಯವರನ್ನು ಈಕೆ ತನ್ನ 19-20ನೆಯ ವಯಸ್ಸಿನಲ್ಲೇ ಮದುವೆಯಾದರು. ಅಸಫ್ ಆಲಿ ಬಹಳ ಪ್ರಭಾವಿ ವಕೀಲರು, ದೆಹಲಿಯನ್ನು ಕಾರ್ಯಕ್ಷೇತ್ರವನ್ನಾಗಿಸಿಕೊಂಡಿದ್ದವರು. ಎಲ್ಲ ಕ್ರಾಂತಿಕಾರಿ ಹೋರಾಟಗಾರರ ನೆಚ್ಚಿನ ವಕೀಲರಾಗಿದ್ದ ಅಸಫ್ ಆಲಿಯವರು ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಅವರ ವಿರುದ್ಧದ ಮೊಕದ್ದಮೆಯಲ್ಲಿ ಆಪಾದಿತರ ವಕೀಲರು. ನ್ಯಾಯಾಲಯದಲ್ಲಿ ಭಗತ್ ಸಿಂಗ್ ಹೇಳಿಕೆಯನ್ನು ಭಾಗಶಃ ಓದಿದ್ದವರೂ ಅವರೇ.

1929ರ ಏಪ್ರಿಲ್ 8ರಂದು ಭಗತ್ ಸಿಂಗ್ ಮತ್ತು ಬಿ. ಕೆ. ದತ್ ಸೆಂಟ್ರಲ್ ಅಸೆಂಬ್ಲಿಯಲ್ಲಿ ಬಾಂಬ್ ಎಸೆದಾದ ಅಸಫ್ ಆಲಿ ಅಸೆಂಬ್ಲಿಯ ಸದಸ್ಯರಾಗಿ ಅಲ್ಲಿದ್ದರು. ಮತ್ತು ಅರುಣಾ ಪ್ರೇಕ್ಷಕರ ಗ್ಯಾಲರಿಯಲ್ಲಿ ಭಗತ್ ಸಿಂಗ್ ಇದ್ದೆಡೆಯಿಂದ ಹತ್ತಿರದಲ್ಲೇ ಕುಳಿತಿದ್ದರು. ಅಂದು ಕೈಗಾರಿಕಾ ವಿವಾದ ಮಸೂದೆ ಮತ್ತು ಭಾರತದ ರಕ್ಷಣಾ ಕಾಯಿದೆಗಳಿಗೆ ಬ್ರಿಟಿಷ್ ವಸಾಹತುಶಾಹಿ ಸರ್ಕಾರವು ತಿದ್ದುಪಡಿಗಳನ್ನು ತರುವ ನಿಬಂಧನೆಗಳನ್ನು ಅಸೆಂಬ್ಲಿಯಲ್ಲಿ ಇರಿಸುವ ಕಾರ್ಯಕ್ರಮ ಇದ್ದುದರಿಂದ ಅರುಣಾ ಅಲ್ಲಿ ಉಪಸ್ಥಿತರಾಗಿದ್ದರು. ಆ ನಿಬಂಧನೆಗಳು ಭಾರತದ ಜನತೆಯ ಕೈಕೋಳಗಳನ್ನು ಇನ್ನೂ ಭದ್ರಪಡಿಸುತ್ತವೆ ಎಂಬ ಕಾರಣದಿಂದಲೇ ಭಗತ್ ಸಿಂಗ್ ಬಾಂಬ್ ಎಸೆಯಲು ಆ ದಿನವನ್ನು ಆಯ್ಕೆ ಮಾಡಿಕೊಂಡಿದ್ದುದು. ನಂತರದ ದಿನಗಳಲ್ಲಿ ಅಸಫ್ ಆಲಿಯವರ ಮುಖಾಂತರ ಅರುಣಾ ಅವರಿಗೆ ಆ ಮೂರು ಕ್ರಾಂತಿವೀರರ ಪರಿಚಯವು ಕಾರಾಗೃಹಕ್ಕೆ ಅಸಫ್ ಆಲಿ ಭೇಟಿ ನೀಡುತ್ತಿದ್ದಾಗ ಕೊಂಚಮಟ್ಟಿಗೆ ಆಯಿತು. ನಂತರ ತಮ್ಮದೇ ಆದ ಸ್ವತಂತ್ರ ರೀತಿಯಲ್ಲಿ ಅರುಣಾ ಸ್ವಾತಂತ್ರ್ಯ ಹೋರಾಟದ ಸಂಘಟಕರಾದರು, ಕಾರ್ಯಕರ್ತರಾದರು, ಸ್ವಯಂಸೇವಕರಾದರು.

1942ರಲ್ಲಿ "ಭಾರತ ಬಿಟ್ಟು ತೊಲಗಿ" ಘೋಷಣೆಯಡಿ ದೊಡ್ಡ ಪ್ರಮಾಣದ ಹೋರಾಟ ನಡೆದಾಗ ಅರುಣಾ ಅವರ ಬಹುಮುಖ ವ್ಯಕ್ತಿತ್ವ ಪ್ರಕಾಶಕ್ಕೆ ಬಂದಿತು. ರಾಮಮನೋಹರ ಲೋಹಿಯಾ, ಸುಚೇತಾ ಕೃಪಲಾನಿ, ಅರುಣಾ ಮತ್ತು ಅಚ್ಯುತ ಪಟುವರ್ಧನ್ ಸೇರಿ ಮುಂಬೈಯಲ್ಲಿ ಭೂಗತ ಚಟುವಟಿಕೆಗಳನ್ನು ಆರಂಭಿಸಿದರು. ಒಂದು ಭೂಗತ ಆಕಾಶವಾಣಿ ಕೇಂದ್ರವನ್ನು ಸ್ಥಾಪಿಸಿ ಅಧಿಕೃತ ಬ್ರಿಟಿಷ್ ವಸಾಹತುಶಾಹಿ ಪ್ರಸಾರ ಕೇಂದ್ರವು ಬಿತ್ತರಿಸದಿದ್ದ ಅನೇಕ ಹೋರಾಟದ ಮಾಹಿತಿಗಳನ್ನೂ ರಾಜಕೀಯ ವಿಶ್ಲೇಷಣೆಗಳನ್ನೂ ಈ ಕೇಂದ್ರದ ಮುಖಾಂತರ ಬಿತ್ತರಿಸುವ ಕ್ರಮವನ್ನು ವಿಚಕ್ಷಣೆಯಿಂದ ಮಾಡಿದಾಗ ಅದರಲ್ಲಿ ಅರುಣಾ ಅವರ ಪಾಲ್ಗೊಳ್ಳುವಿಕೆಯು ಮಹತ್ವದ್ದಾಗಿತ್ತು. ನಂತರ ಬೇರೆ ಮಾದರಿಯ ಭೂಗತ ಚಟುವಟಿಕೆಗಳಲ್ಲಿ ತೊಡಗಿ ಅರುಣಾ ಕೆಲವು ವಿಧ್ವಂಸಕ ಕೃತ್ಯಗಳಿಂದ ವಸಾಹತುಶಾಹಿ ದರ್ಪದ ಬ್ರಿಟಿಷ್ ಸರ್ಕಾರಕ್ಕೆ ಕೆಟ್ಟ ಕನಸಾದರು. ಈ ರೀತಿ ಕೃತ್ಯಗಳಲ್ಲಿ ತೊಡಗಿದ್ದವರಿಗೆ ಬಹಿರಂಗವಾದ ಕರೆಯೊಂದನ್ನು ಗಾಂಧೀಜಿ ಜೈಲಿನಿಂದಲೇ ನೀಡಿದ್ದರು. ಅಂತಹ ಚಟುವಟಿಕೆಗಳನ್ನು ನಿಲ್ಲಿಸಿ, ಭೂಗತ ಸ್ಥಿತಿಯಿಂದ ಹೊರಬಂದು, ತಮ್ಮನ್ನು ತಾವು ದಸ್ತಗಿರಿಗೆ ಒಳಪಡಿಸಿಕೊಳ್ಳಬೇಕೆಂಬುದು ಆ ಕರೆಯಾಗಿತ್ತು. ಗಾಂಧೀಜಿಯವರನ್ನು ನಿಕಟವರ್ತಿಯಾಗಿ ಕಂಡಿದ್ದ ಅರುಣಾ ಈ ಕರೆಗೆ ಮನ್ನಣೆ ನೀಡುವುದಿಲ್ಲವೆಂದು ಘೋಷಿಸಿ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು. ಆಕೆಯನ್ನು ಭೇಟಿಯಾದರೆ ಅವರ ಮನವೊಲಿಸುವ ಭರವಸೆ ತಮಗಿದೆಯೆಂದು ಗಾಂಧೀಜಿ ಹೇಳಿದ್ದು ಅರುಣಾಗೆ ತಿಳಿದುಬಂತು. ಯಾರೂ ಮಾಡದ ಒಂದು ಕೆಲಸವನ್ನು ಅರುಣಾ ಆಗ ಮಾಡಿದರು. ಒಂದು ದಿನ ಕಚೇರಿಯ ವೇಳೆಯಲ್ಲಿ ಮುಂಬೈ ಸರ್ಕಾರಿ ಕೇಂದ್ರ ಕಚೇರಿಯಲ್ಲಿ ಒಮ್ಮಿಂದೊಮ್ಮೆಗೆ ಆಕೆ ಕಾಣಿಸಿಕೊಂಡರು. ಮಾನ್ಯ ಎಚ್. ವಿ. ಆರ್. ಅಯ್ಯಂಗಾರ್ ಆಗ್ಗ ಮುಂಬೈ ಪ್ರಾಂತ್ಯದಲ್ಲಿ ಬ್ರಿಟಿಷ್ ಸರ್ಕಾರದ ಗೃಹ ಕಾರ್ಯದರ್ಶಿಯಾಗಿದ್ದರು. ನೇರವಾಗಿ ಅರುಣಾ ಕಚೇರಿಗೆ ಹೋಗಿ ಅವರ ಮುಂದೆ ನಿಂತು ತಾವು ಯಾರೆಂದು ತಿಳಿಸಿ ಹೇಳಿದರು : "ಗಾಂಧೀಜಿ ನನ್ನನ್ನು ಭೇಟಿಯಾಗಬೇಕೆಂದು ಇಚ್ಛಿಸಿದ್ದಾರೆ. ನನ್ನನ್ನು ಅವರ ಬಳಿಗೆ ಕೊಂಡೊಯ್ಯಲು ಏರ್ಪಾಟು ಮಾಡಿ." ಅಯ್ಯಂಗಾರ್ಯರಿಗೆ ದಿಗ್ಭ್ರಮೆಯಾಯಿತು. ದಸ್ತಗಿರಿ ಮಾಡಲು ಪೊಲೀಸರು ಹೊಂಚು ಹಾಕುತ್ತಿದ್ದಾಗ ಕೈಗೆ ಸಿಗದಿದ್ದ ಯುವತಿ ತಮ್ಮ ಮುಂದೆ ತಾನಾಗಿ ಬಂದು ನಿಂತಿದ್ದಾಳೆ. ಕಾನೂನು ಪ್ರಕಾರ ಆಕೆಯನ್ನು ದಸ್ತಗಿರಿ ಮಾಡಿಸಬೇಕು. ಆದರೆ ಗಾಂಧೀಜಿಯವರನ್ನು ಭೇಟಿ ಮಾಡಿಸಲು ಆಕೆ ಕೇಳುತ್ತಿದ್ದಾಳೆ! ಪುಣೆಯಲ್ಲಿದ್ದ ಗಾಂಧೀಜಿಯವರಲ್ಲಿಗೆ ಆಕೆಯನ್ನು ಕೊಂಡೊಯ್ಯಲು ಏರ್ಪಾಟು ಮಾಡಿ ದಸ್ತಗಿರಿಯ ವಿಷಯವನ್ನು ಅಯ್ಯಂಗಾರ್ ಮುಂದೂಡಿದರು. ಗಾಂಧೀಜಿಯವರ ಅಭಿಪ್ರಾಯವನ್ನು ಒಪ್ಪುವುದಿಲ್ಲವೆಂದು ಅರುಣಾ ಅವರೊಂದಿಗೆ ವಾದ ಮಾಡಿ ಹೇಳಿದಳು : "ನೀವು ನಮ್ಮ ಮುಂದಾಳು. ನಿಮ್ಮಲ್ಲಿ ನಮಗೆಲ್ಲಾ ಅಪಾರ ಗೌರವವಿದೆ. 'ಭಾರತ ಬಿಟ್ಟು ತೊಲಗಿ' ಎಂಬ ಘೋಷಣೆ ಕೊಟ್ಟದ್ದು ನೀವು. ಈ ದೌರ್ಜನ್ಯದ

ಬ್ರಿಟಿಷ್ ಸರ್ಕಾರಕ್ಕೆ ತಲೆಬಾಗಿ ದಸ್ತಗಿರಿಗೆ ಒಳಗಾಗಲು ನಾನು ಸಿದ್ಧಳಿಲ್ಲ. ಅವರೇ ನನ್ನನ್ನು ಹಿಡಿದರೆ ಅದು ಬೇರೆ ಪ್ರಶ್ನೆ."

—ಹೀಗೆ ಹೇಳಿ ಮತ್ತೆ ಅರುಣಾ ಭೂಗತರಾದರು. ಕೆಲವು ದಿನಗಳು ಕಳೆದ ಮೇಲೆ ಇನ್ನೊಂದು ಘಟನೆಯಾಯಿತು. ಮುಂಬೈನ ಗೋವಾಳಿಯಾ ಕೆರೆ ಮೈದಾನದಲ್ಲಿ ಅಂದು ರಾಷ್ಟ್ರಧ್ವಜವನ್ನು ಹಾರಿಸುವ ಕಾರ್ಯಕ್ರಮವಿತ್ತು. ಧ್ವಜ ಹಾರಿಸಬೇಕಾಗಿದ್ದವರು ಮೌಲಾನಾ ಅಬ್ದುಲ್ ಕಲಾಂ ಆಜಾದ್. ಆದರೆ ಬ್ರಿಟಿಷ್ ವಸಾಹತು ಸರ್ಕಾರ ಅವರನ್ನು ದಸ್ತಗಿರಿ ಮಾಡಿ ಕಾರ್ಯಕ್ರಮವನ್ನು ಹೊಸಕಿಹಾಕುವ ಉಪಾಯ ಹೂಡಿತು. ಜನರಲ್ಲಿ ಹತಾಶೆ ಮತ್ತು ಅಸಮಾಧಾನ ತುಂಬಿತ್ತು. ಪ್ರಕಟಿತವಾದ ದಿನ ಧ್ವಜಾರೋಹಣ ಸಾಧ್ಯವಿಲ್ಲವೆಂದು ಬ್ರಿಟಿಷ್ ಸರ್ಕಾರ ಕೊಚ್ಚಿಕೊಳ್ಳುತ್ತಿದ್ದಾಗ ಎಲ್ಲಿಂದಲೋ ಅರುಣಾ ಪ್ರತ್ಯಕ್ಷಳಾಗಿ ಧ್ವಜವನ್ನು ಹಾರಿಸಿ ಇಡೀ ದೇಶದ ಹೆಮ್ಮೆಯನ್ನು ಮೆರೆದಳು. ಎಲ್ಲೆಲ್ಲೂ ಸಂತಸ, ಸಂಭ್ರಮಗಳು ತುಂಬಿಬಂದವು. ಗಾಂಧೀಜಿ "ಭಲೇ ಹುಡುಗಿ" ಎಂದರು; ಅರುಣಾ ದಸ್ತಗಿರಿಯಾಗಿ ಕಾರಾಗೃಹವನ್ನು ಸೇರಿದರು. ಅಸಫ್ ಆಲಿ ದೆಹಲಿಯಲ್ಲಿ ಮೊದಲೇ ದಸ್ತಗಿರಿಯಾಗಿಬಿಟ್ಟಿದ್ದರು.

ಇದಕ್ಕೆ ಮುಂಚೆ ಭೂಗತಳಾಗಿದ್ದ ಸಮಯದಲ್ಲಿ ಕೆಲಕಾಲ ಅರುಣಾ ಮದ್ರಾಸಿನಲ್ಲಿದ್ದರು. ಗಂಡಸಿನ ಪೋಷಾಕು ಧರಿಸಿ ದಿನವೆಲ್ಲಾ ಎಲ್ಲರಿಗೂ ಕಾಣುವಂತೆಯೇ ಅನೇಕ ಕಡೆಗಳಲ್ಲಿ ಬಹಿರಂಗವಾಗಿ ಆಕೆ ಓಡಾಡುತ್ತಾ ಹೋರಾಟವನ್ನು ಅಣಿಗೊಳಿಸುತ್ತಿದ್ದರು. ಪೊಲೀಸರಿಗೂ ಸಹ ಆಕೆ ಅರುಣಾ ಎಂದು ತಿಳಿದಿದ್ದೂ ದಸ್ತಗಿರಿ ಮಾಡಲು ಅವರು ಹಿಂಜರಿದರು. ಅವರು ತೀರ್ಮಾನ ಕೈಗೊಳ್ಳುವ ಮೊದಲೇ ಆಕೆ ಮತ್ತೆ ಮುಂಬೈ ಸೇರಿಕೊಂಡಿದ್ದರು.

ಸ್ವಾತಂತ್ರ್ಯದ ನಂತರ ಈಗ ದೆಹಲಿಯಲ್ಲಿ ಅಸಫ್ ಆಲಿ ರಸ್ತೆಯೆಂದು ಕರೆಯಲಾಗಿರುವ ರಸ್ತೆಯ ಒಂದು ಮನೆಯಲ್ಲಿ ವಾಸವಾಗಿದ್ದು ಅರುಣಾ ಅನೇಕ ರಚನಾತ್ಮಕ ಕೆಲಸಗಳಲ್ಲಿ ತೊಡಗಿದರು. ದೆಹಲಿಯ ಮೊಟ್ಟಮೊದಲ ಮಹಿಳಾ ಮಹಾ ಪೌರರಾಗಿ ಆಕೆ ಒಂದು ಅವಧಿಯ ಕಾಲ ಕೆಲಸ ಮಾಡಿದ್ದನ್ನು ಬಿಟ್ಟರೆ ಯಾವ ಅಧಿಕಾರವನ್ನೂ ಹೊಂದಲಿಲ್ಲ, ಹೊಂದುವ ಅಪೇಕ್ಷೆಯನ್ನೂ ಇರಿಸಿಕೊಂಡಿರಲಿಲ್ಲ. ಬದಲಾಗಿ ಹಲವು ಸಾರ್ವಜನಿಕ ಸಂಸ್ಥೆಗಳ ಕಾರ್ಯಕರ್ತೆಯಾಗಿ ಮಹಿಳಾ ಚಳುವಳಿ, ಪತ್ರಿಕೋದ್ಯಮ, ಶಾಂತಿ ಚಳುವಳಿ, ಮುಂತಾದವುಗಳಲ್ಲಿ ಪಾಲ್ಗೊಂಡು ವೈಜ್ಞಾನಿಕ ಸಮಾಜವಾದಿ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿ ಆಕೆ ಸುಮಾರು ಐವತ್ತು ವರ್ಷ ಸತತವಾಗಿ ದುಡಿದರು. ಜನಸಾಮಾನ್ಯರಿಂದ ತಲಾ 250 ರೂಪಾಯಿಗಳಂತೆ ಚಂದಾ ಎತ್ತಿ ಒಂದು ಪ್ರತಿಷ್ಠಾನವನ್ನು ಸ್ಥಾಪಿಸಿ ಅದರ ಆಶ್ರಯದಲ್ಲಿ 'ಲಿಂಕ್' ವಾರಪತ್ರಿಕೆ ಮತ್ತು 'ಪೇಟ್ರಿಯಟ್' ದಿನಪತ್ರಿಕೆಗಳನ್ನು ವ್ಯವಸ್ಥೆಗೊಳಿಸಿದ್ದು ಅವರು. ಬೆಂಗಳೂರಿನಿಂದ ಸಹ ಸುಮಾರು ನೂರು ಮಂದಿ ಈ ರೀತಿ ಚಂದಾ ಕೊಟ್ಟು ಪ್ರತಿಷ್ಠಾನದ ಸದಸ್ಯರಾಗಿದ್ದರು. ಮುಂಬೈಯಿಂದ ಕಮ್ಯುನಿಸ್ಟ್ ನಾಯಕ ಎಸ್. ಎ. ಡಾಂಗೆ ಕೇವಲ ಶ್ರೀಪಾದ ಅಮೃತ್ ಎಂಬ ಹೆಸರಿನಲ್ಲಿ ಚಂದಾ ಕೊಟ್ಟು ಏನೋ ಕುತಂತ್ರದಲ್ಲಿ ತೊಡಗಿದ್ದರೆಂಬ ಹುಯಿಲು ಕೆಲವು ವಾರಗಳ ಕಾಲ ರಾಷ್ಟ್ರವ್ಯಾಪಿಯಾಗಿತ್ತು, ಅರುಣಾ ಅಸಫ್ ಆಲಿ ನೇತೃತ್ವದ "ಕೃತ್ರಿಮ ಪತ್ರಿಕೋದ್ಯಮ" ಗುಂಪಿಗೆ ಸೋವಿಯತ್ ಒಕ್ಕೂಟವು ಹಣ ನೀಡಿತ್ತೆಂಬ ಆಪಾದನೆಯನ್ನೂ ಆಗ ಮಾಡಲಾಗಿತ್ತು! ವಿ. ಕೆ. ಕೃಷ್ಣ ಮೆನನ್ ಸಹ ಅರುಣಾ ಅವರ ಆಪ್ತ ಸ್ನೇಹಿತನಾಗಿದ್ದದ್ದು ಇಂತಹ ಕುಚೋದ್ಯಗಳಿಗೆ ಸ್ವಲ್ಪಮಟ್ಟಿಗೆ ಕಾರಣವಾಗಿತ್ತು. ಪುರೋಗಾಮಿತ್ವ, ನೈಜ ಸ್ವಾತಂತ್ರ್ಯ, ಸಾಮ್ರಾಜ್ಯಶಾಹಿಗಳಿಗೆ ಕಟು ವಿರೋಧ, ಮಹಿಳಾ ಹಕ್ಕುಗಳು, ಸಮಾಜವಾದಿ ಸಂಸ್ಕೃತಿ, ವಿಶ್ವಶಾಂತಿ, ಇತ್ಯಾದಿಗಳು ಅರುಣಾ ಅವರ ಪತ್ರಿಕೆಗಳ ಮೂಲ ನೆಲೆಗಳಾಗಿದ್ದವು.

ಸ್ವಾತಂತ್ರ್ಯ ಸಂಗ್ರಾಮದ ಮೌಲ್ಯಗಳ ಪರಿಚಯವೇ ಇರದ ಒಬ್ಬ ಯುವಕ ತುರ್ತು ಪರಿಸ್ಥಿತಿಯ ಕಾಲದಲ್ಲಿ ದಿಢೀರನೆ ಮಹಾ ನಾಯಕನಾದ. ಅಂದಿನ ಪ್ರಧಾನಿಯ ಸುಪುತ್ರನಾದ ಈತನ ಕಾರುಬಾರುಗಳನ್ನು ಸುತರಾಂ ಗಣನೆಗೆ ತೆಗೆದುಕೊಳ್ಳಕೂಡದೆಂದು ಅರುಣಾ ತೀರ್ಮಾನಿಸಿದ್ದರು. ಅದರಂತೆ ಅವರ ಪತ್ರಿಕೆಗಳಲ್ಲಿ ಆತನ ಛಾಯಾಚಿತ್ರಗಳು, ಹೇಳಿಕೆಗಳು, ಕಾರ್ಯಕ್ರಮಗಳು ಪ್ರಕಟಗೊಳ್ಳುತ್ತಿರಲಿಲ್ಲ. ಬದಲಾಗಿ ಆತನ ಬಾಲಿಶತನ ಮತ್ತು ಸಂವಿಧಾನ ಬಾಹಿರವಾದ ಕೃತ್ಯಗಳು ಟೀಕೆಗೆ ಗುರಿಯಾಗುತ್ತಿದ್ದುವು. ಆ ಬಗ್ಗೆ ಅನೇಕ

ಸ್ನೇಹಿತರು ಅರುಣಾ ಅವರಿಗೆ ಸಲಹೆ, ಎಚ್ಚರ, ಬುದ್ಧಿವಾದ, ಎಲ್ಲಾ ನೀಡಿದ್ದರಾದರೂ ಆಕೆ ಜಗ್ಗಲಿಲ್ಲ. ಸ್ವತಃ ಇಂದಿರಾ ಗಾಂಧಿ ಇವರನ್ನೊಮ್ಮೆ ಬರಮಾಡಿಕೊಂಡು ಏನೋ 'ಚರ್ಚಿಸಿ' ಕಳಿಸಿದ್ದರಂತೆ. ಆದರೆ ಅರುಣಾ ತಮ್ಮ ನಿಲುವನ್ನು ಬದಲಾಯಿಸಲಿಲ್ಲ. ಅವರ ಪತ್ರಿಕಾ ಕಟ್ಟಡಕ್ಕೆ ನೀರು ಸರಬರಾಜು ನಿಂತಿತು, ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಗೊಂದಲ ಉಂಟಾಯಿತು. ಕಡೆಗೆ ಒಂದು ದಿನ ಕಚೇರಿಗೆ ಬೆಂಕಿಯೂ ಬಿದ್ದಿತು. ಗಾಂಧೀಜಿಯವರನ್ನು ಎದುರಿಸಿದ್ದ ಈಕೆ ಆ ಹೆಸರಿನ ಒಬ್ಬ ಯುವಕನಿಗೆ ಅಂಜುವ ಪ್ರಶ್ನೆಯೇ ಇರಲಿಲ್ಲ. ಎಲ್ಲವನ್ನೂ ಸ್ಥೈರ್ಯದಿಂದ ಎದುರಿಸಿ ತಮ್ಮ ವಿಮರ್ಶಾ ಧೋರಣೆಯನ್ನು ಉಳಿಸಿಕೊಂಡರು. 1977ರ ನಂತರ (ಅಂದರೆ ಭಾರತೀಯ ಜನಸಂಘವೂ ಸೇರಿದಂತೆ ಜನತಾ ಪಕ್ಷದ ಸರ್ಕಾರವು ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ತರುವಾಯದಲ್ಲಿ) ಕೆಲಕಾಲ ಅರುಣಾ ಅವರು ಇಂದಿರಾ ಗಾಂಧಿಯವರ ಬೆಂಬಲಕ್ಕೆ ನಿಂತಿದ್ದು ನಿಜ. ಆದರೆ ಕ್ರಮೇಣ ಹಿಂದಕ್ಕೆ ತೆಗೆದುಕೊಂಡು ತಮ್ಮ ವಿಮರ್ಶಾ ಮಾರ್ಗಕ್ಕೆ ಹಿಂದಿರುಗಿದರು. ಆಗ ಗಣೇಶ ಶುಕ್ಲಾ, ಗಿರೀಶ ಮಿಶ್ರಾ, ಗಿರೀಶ ಮಾಥುರ, ಮೊದಲಾದ ಹಿರಿಯ ಪತ್ರಕರ್ತರು ಅರಣಾ ಅವರಿಂದ ದೂರ ಸಿಡಿದರು. ಅರುಣಾ ವಿಚಲಿತರಾಗಲಿಲ್ಲ.

ಶಾಂತಿ ಸೌಹಾರ್ದತಾ ಸಮಿತಿ ಹಾಗೂ ಭಾರತದ ಮಹಿಳೆಯರ ರಾಷ್ಟ್ರೀಯ ಒಕ್ಕೂಟಗಳ ಉಪಾಧ್ಯಕ್ಷೆಯಾಗಿ ಅರುಣಾ ಸುಮಾರು ಇಪ್ಪತ್ತೈದು ವರ್ಷ ಕೆಲಸ ಮಾಡಿದರು. ಒಂದು ಮಹಿಳಾ ಅಧಿವೇಶನ ಉದ್ಘಾಟಿಸಲು 80ರ ಆದಿ ಭಾಗದಲ್ಲಿ ಒಮ್ಮೆ ಅವರು ಬೆಂಗಳೂರಿಗೂ ಬಂದಿದ್ದರು. ಭಾರತ - ಸೋವಿಯತ್ ಸಾಂಸ್ಕೃತಿಕ ಸಂಘದ ಪಾಟ್ನಾ ಅಧಿವೇಶನವನ್ನು 70ರ ದಶಕದಲ್ಲಿ ಅವರು ಉದ್ಘಾಟಿಸಿದ್ದಾಗ ಪ್ರಸ್ತುತ ಲೇಖಕ ಅವರನ್ನು ಭೇಟಿ ಮಾಡುವ ಸಂದರ್ಭ ಒದಗಿಬಂದಿತ್ತು; ಅದಕ್ಕೂ ನಾಲ್ಕೈದು ವರ್ಷಗಳ ಮುಂಚೆ ದೆಹಲಿಯ ಅವರ ಮನೆಯ ಬಳಿ ಒಂದು ಕಚೇರಿಯಲ್ಲಿ ಅವರನ್ನು ಕಾಣುವ ಅವಕಾಶವೂ ಇತ್ತು. ಇನ್ನೂ ಅನೇಕ ಬಾರಿ ಅವರನ್ನು ನೋಡಿ ಮಾತನಾಡಿಸುವ ವಿಶೇಷ ಗೌರವ ದಕ್ಕಿದ್ದುದು ಸ್ಮೃತಿಯಲ್ಲಿ ಸದಾ ಉಳಿಯುತ್ತದೆ.

ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ ಅರುಣಾ ಅವರು ರೇಣು ಚಕ್ರವರ್ತಿಯವರಿಗೆ ಬಹಳ ನಿಕಟವಾಗಿದ್ದರು. ಅವರೊಡನೆ ಹಲವಾರು ಪ್ರತಿಭಟನೆಗಳಲ್ಲಿ, ಸಂವಾದಗಳಲ್ಲಿ ಮತ್ತು ನಿಯೋಗಗಳಲ್ಲಿ ಪಾಲ್ಗೊಂಡಿದ್ದರು. ಸ್ವಯಂ ವರ್ಚಸ್ಸಿನಿಂದ ಮಹಿಳೆ ತನ್ನ ಹಕ್ಕುಗಳನ್ನು ಪಡೆಯಬೇಕು ಮತ್ತು ಪಡೆಯುತ್ತಾಳೆ ಎಂಬುದು ಅವರ ನಿಲುವಾಗಿತ್ತು. ಯಾರ ಹಂಗೂ ಇಲ್ಲದೆ ಹೋರಾಟಗಳಿಂದ ಮಹಿಳೆ ತನ್ನ ಆಶಯಗಳನ್ನು ಪೂರೈಸಿಕೊಳ್ಳಬೇಕೆಂಬುದು ಅವರ ಸಿದ್ಧಾಂತವಾಗಿತ್ತು. ರಾಜಕೀಯವಾಗಿ ಅವರು ಸಾಮ್ರಾಜ್ಯಶಾಹಿಯ ಕಟ್ಟಾ ವಿರೋಧಿ, ಆರ್ಥಿಕ ಸ್ವಾವಲಂಬನೆಯ ಪ್ರತಿಪಾದಕಿ; ಸಾಮಾಜಿಕವಾಗಿ ಸಂಪೂರ್ಣಾರ್ಥದಲ್ಲಿ ಧರ್ಮನಿರಪೇಕ್ಷತೆ ಮತ್ತು ಸಮಾನತೆ ಅವರ ಆಯುಧ; ವೈಯ್ಯಕ್ತಿಕವಾಗಿ ಪ್ರಜಾಪ್ರಭುತ್ವವಾದಿ ನಡತೆ, ಶ್ರದ್ಧೆ, ನಿಷ್ಠೆ ಅಚಲವಾಗಿ ಅವರಲ್ಲಿ ಮೈಗೂಡಿದ್ದವು. ಅಂತಹ ಅರುಣಾ ಇನ್ನಿಲ್ಲ. ಅವರಿಗೆ 'ಅಚಲ' ತನ್ನ ಮನಃಪೂರ್ವಕ ನಮನವನ್ನು ಸಲ್ಲಿಸುತ್ತದೆ.

●

ಕರ್ನಾಟಕ ಸರ್ಕಾರ

ಅಭಿವೃದ್ಧಿ ಪಥದಲ್ಲಿ ಕರ್ನಾಟಕ

ಕರ್ನಾಟಕದಲ್ಲಿ ಕಳೆದ ಒಂದು ವರ್ಷದಿಂದ ಹೊಸ ವಾತಾವರಣ. ಜನರ ಕ್ಷೇಮಾಭ್ಯುದಯಕ್ಕೆ ಕರ್ನಾಟಕ ಕಂಕಣಬದ್ಧ. ಜನತೆಯ ಆಸೆ ಆಕಾಂಕ್ಷೆಗಳ ಈಡೇರಿಕೆಗೆ ಅವಿರತ ಶ್ರಮ, ಪ್ರಾಮಾಣಿಕ ಪ್ರಯತ್ನ ಈ ನಿಟ್ಟಿನಲ್ಲಿ ಹೊಸ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನ.

ವಸತಿ ಸಮಸ್ಯೆ ಪರಿಹರಿಸುವುದಕ್ಕಾಗಿ ವಸತಿಹೀನರ ಸಮೀಕ್ಷೆ. ಈ ವರ್ಷ 1.87 ಲಕ್ಷ ಮನೆ ನಿರ್ಮಾಣ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಹಮಾಲಿ, ದೇವದಾಸಿ, ನಾಲ್ಕನೇ ದರ್ಜೆ ಸರ್ಕಾರಿ ನೌಕರರೂ ಸೇರಿದಂತೆ ವಿವಿಧ ವರ್ಗದವರಿಗೆ 483 ಕೋಟಿ ರೂ. ವೆಚ್ಚದ ವಸತಿ ಯೋಜನೆ.

ಗ್ರಾಮಕ್ಕೊಂದು ಶಾಲೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಳ, ಯೋಧರ ಪತ್ನಿಯರಿಗೆ ಮಾಸಾಶನ 500 ರೂ.ಗಳಿಗೆ ಏರಿಕೆ, ಅಂಗವಿಕಲರಿಗೆ ತ್ರಿಚಕ್ರ ವಾಹನ, ಕಿವುಡರಿಗೆ ಉಚಿತ ಶ್ರವಣ ಸಾಧನ, ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಬಸ್ ಪಾಸ್.

ನಗರಸಭೆ ಮತ್ತು ಪುರಸಭೆಯ ಮಿತಿಯಲ್ಲಿ ಬರುವ ರೆವಿನ್ಯೂ ನಿವೇಶನಗಳಲ್ಲಿನ ಅನಧಿಕೃತ ನಿರ್ಮಾಣಗಳ ಸಕ್ರಮ.

ಕೃಷಿಕರ ಅಭ್ಯುದಯಕ್ಕಾಗಿ ಸಮಗ್ರ ಕೃಷಿ ನೀತಿಯ ಅನುಷ್ಠಾನ. ಅದಕ್ಕಾಗಿ 1,000 ಕೋಟಿ ರೂ.ಗಳ ಯೋಜನೆ.

ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ರಾಜ್ಯದ ಪಾಲಿನ ನೀರಿನ ಪೂರ್ಣ ಬಳಕೆಗೆ ಸರ್ವ ಯತ್ನ.

ನೀರಾವರಿ ಯೋಜನೆಗಳಿಗೆ 635 ಕೋಟಿ ವೆಚ್ಚ. ಇದರಿಂದ 26,366 ಹೆಕ್ಟೇರ್ ಪ್ರದೇಶ ನೀರಾವರಿ.

ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕ್ರಮ.

ಪರಿಶಿಷ್ಟ ಜಾತಿ : ವರ್ಗದ ವಿದ್ಯಾರ್ಥಿಗಳಿಗಾಗಿ 8.40 ಕೋಟಿ ರೂ. ವೆಚ್ಚದಲ್ಲಿ 100 ವಿದಾರ್ಥಿ ನಿಲಯಗಳು. ಹಿಂದುಳಿದ ವರ್ಗದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗಾಗಿ 40 ವಿದ್ಯಾರ್ಥಿನಿಲಯಗಳ ಸ್ಥಾಪನೆ. 50,000ಕ್ಕೂ ಹೆಚ್ಚು ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ.

ಸರ್ಕಾರಿ ಸೇವೆಯಲ್ಲಿ ಶೇಕಡ 25ರಷ್ಟು ಹುದ್ದೆಗಳು ಮಹಿಳೆಯರಿಗಾಗಿ ಮೀಸಲು.

ಪ್ರತಿ ಜಿಲ್ಲೆಗೊಂದು ಮುರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭ. ಬಡವರಿಗೆ ಕೆ.ಜಿ.ಗೆ 3-20 ರೂ.ರ ದರದಲ್ಲಿ ಅಕ್ಕಿ ವಿತರಣೆ. ನಗರದ ಬಡವರಿಗೂ ಈ ಯೋಜನೆ, ಕೆ.ಜಿ.ಗೆ 2 ರೂ.ರಂತೆ ಗೋಧಿ.

30,000 ಕೋಟಿ ರೂ.ಗಳ ವೆಚ್ಚದಲ್ಲಿ 19 ವಿದ್ಯುತ್ ಯೋಜನೆಗಳ ಪೂರೈಕೆ ಕ್ರಮ. 4 ವರ್ಷಗಳಲ್ಲಿ 5,500 ಮೆ.ವಾ. ವಿದ್ಯುತ್ ಉತ್ಪಾದನೆ.

ರೈತರ ಹಿತಾಸಕ್ತಿಯನ್ನು ಕಾಪಾಡಲು ಭೂ ಸುಧಾರಣೆ ಕಾಯ್ದೆಗೆ ತಿದ್ದುಪಡಿ. ಇದರಿಂದ ಯೋಗ್ಯ ಬೆಲೆಗೆ ಜಮೀನು ಮಾರಾಟಕ್ಕೆ ಅವಕಾಶ. ಈದ್ಗಾ ಮೈದಾನ ವಿವಾದಕ್ಕೆ ಶಾಂತಿಯುತ ಇತ್ಯರ್ಥ.

ವಿವಿಧ ಮೂಲಗಳಿಂದ ಗುರಿ ಮೀರಿ ಸಂಪನ್ಮೂಲ ಕ್ರೋಢೀಕರಣ.

● ಕರ್ನಾಟಕ ವಾರ್ತೆ



ಪುಸ್ತಕ ಪರಿಚಯ

ಭಾಗೀರಥಿ ಹೆಗಡೆ ಅವರ 'ಪ್ರವಾಹ'

ಭಾಗೀರಥಿ ಹೆಗಡೆ ಇದಾಗಲೇ ತಮ್ಮ 'ಸ್ವೀಕಾರ' ಮತ್ತು 'ಅರ್ಘ' ಕಥಾ ಸಂಕಲನಗಳ ಮೂಲಕ ಪರಿಚಿತರಾಗಿದ್ದಾರೆ. ಇವರ 'ಪ್ರವಾಹ' ಹವ್ಯಕ ಮಾತುಗಳ ಸೊಗಸಿನಲ್ಲಿ, ಆಡುಭಾಷೆಯ ಹದಬೆರೆತ ಬಳಕೆಯಲ್ಲಿ, ಆಯ್ದ ಕಥಾ ವಸ್ತುವಿನ ವೈವಿಧ್ಯದಲ್ಲಿ ವಿಶೇಷವಾಗಿ ಗಮನ ಸೆಳೆಯುವ ಕಥಾಸಂಕಲನ.

ಇಲ್ಲಿಯ ಕತೆಗಳ ವಸ್ತು ವಿಶಿಷ್ಟವಾದದ್ದು, ವಿಭಿನ್ನವಾದದ್ದು. ತಮ್ಮ ಅನುಭವದಾಚೆಗೆ ಜಿಗಿಯಬಲ್ಲ, ಇತರರ ಅನುಭವಗಳನ್ನು ತಮ್ಮ ಕಲ್ಪನೆಯ ಕನ್ನಡಿಯಲ್ಲೇ ಪ್ರತಿಬಿಂಬಿಸಬಲ್ಲ ಧೈರ್ಯ, ಪ್ರತಿಭೆ ಎರಡೂ ಇವರ ಲೆಕ್ಕಣಿಯಲ್ಲಿದೆ. 'ಉರಿದಾರಿ' ಕತೆಯಲ್ಲಿ 'ಸಮಾನತೆಗಾಗಿ ಎತ್ತರವನ್ನು ಸವರಬೇಕೆಂದು ಸಿಕ್ಕವರನ್ನೆಲ್ಲ ಕೊಂದ' ಶಂಕರಿಯ ಕತೆ ಇದ್ದರೆ, 'ಹಾದಿ' ಕತೆಯಲ್ಲಿ ರಾಮ ಜನ್ಮಭೂಮಿ ಗಲಭೆಯ ಹಿನ್ನೆಲೆಯಲ್ಲಿ ಮುಸಲ್ಮಾನ ಹುಡುಗನನ್ನು ಮದುವೆಯಾದ ಹಿಂದೂ ಹುಡುಗಿಯ ಕತೆ ಇದೆ.

ಪಾತ್ರಗಳಿಗೆ ಜೀವ ತುಂಬುವ ಕಲೆ ಭಾಗೀರಥಿಯವರಿಗೆ ಚೆನ್ನಾಗಿಯೇ ಬಂದಿದೆ. 'ಉರಿದಾರಿ'ಯ ಉಗ್ರಗಾಮಿ ಶಂಕರಿ, ತನ್ನ ಮೊಮ್ಮಗನ ಕೂಳು ಅನ್ನಕ್ಕೂ ಮಗನ ಕೈಚಾಚಬೇಕಾದ ಅವಳ ತಾಯಿ, ಬದುಕಿನ ಸಂಜೆಯಲ್ಲಿ ಸೊಸೆಯ ಮಾತಿನ ಬಾಣಗಳು ಚುಚ್ಚುತ್ತಿದ್ದಂತೆ ಇಡೀ ಬದುಕಿನ ಚಿತ್ರವನ್ನು ಎದುರು ಕೌಚಿಕೊಂಡು ಕುಳಿತ 'ಶರಶಯ್ಯೆ'ಯ ಮುದುಕಿ, ಅವಸ ಹೆಸರಿಲ್ಲದೆ ಹುಟ್ಟಿದ 'ಸೂರ್ಯಪುತ್ರ'....ಇಂಥಾ ಪಾತ್ರಗಳನ್ನು ಕಣ್ಣಿಗೆ ಕಟ್ಟಿದಂತೆ ಕಡೆದು ನಿಲ್ಲಿಸುತ್ತಾರೆ. ಇವರ ಹೆಚ್ಚಿನ ಕತೆಗಳು ಸ್ವಗತದ ದಾಟಿಯಲ್ಲಿ, ಪಾತ್ರಗಳ ಮೆಲುಕುಗಳಾಗಿ ಹೊರಬಿದ್ದಿವೆ.

'ಉರಿದಾರಿ', 'ಪಾತ್ರ', 'ಶರಶಯ್ಯೆ', 'ಸೂರ್ಯಪುತ್ರ', 'ಹಾದಿ' ಈ ಸಂಕಲನದ ಮುಖ್ಯ ಕತೆಗಳು. ಇಲ್ಲಿಯ ಮುದುಕಿಯರು, ಅವ್ವಂದಿರು ಹೋರಾಟದ ಬದುಕಿನ ಗಟ್ಟಿಗಿತ್ತಿಯರು. ಜೀವನ ಕುರುಕ್ಷೇತ್ರದಲ್ಲಿ ಸೆಣೆಸಾಡಿ ಬದುಕಿದವರು, 'ಶರಶಯ್ಯೆ'ಯಲ್ಲಿ ಸ್ವಗತಕ್ಕೆ ತೊಡಗಿದವರು. 'ಪಾತ್ರ' ಕತೆಯಲ್ಲಿ ಲೋಕದ ಮಾತನ್ನೆಲ್ಲ ಮರೆತುಬಿಟ್ಟ ಮಂಜುಗಣ್ಣಿನ ಆಜ್ಜಿಗೆ 'ಕೊಯ್ದಿಟ್ಟ ಹರಿವೆ ಸೊಪ್ಪಿನಂತೆ ಬಾಡಿದ' ಮೊಮ್ಮಗಳ ಮೊಗ ಕಾಣುತ್ತದೆ, ಮೊಮ್ಮಗಳ ಕಣ್ಣಲ್ಲಿ ಹಾಯುವ ನೆರಳುಗಳು ಕಾಣುತ್ತವೆ. ಬದುಕಿನ ಈ ಕೊನೆಯಲ್ಲಿ 'ಹೊಟ್ಟೆ ಪರಮಾಯ, ಆ ಐರಾವಣ ನೆಲಕ್ಕೆ ನ್ಯಾವಳಾಗಿ ನರಳೋ ಚಂದ' ನೋಡುವ ಛಲ ಅವಳದು ! 'ಉರಿದಾರಿ'ಯಲ್ಲಿ ಮೊಮ್ಮಗನ ಭಾರವನ್ನು ಒಂಟಿ ಹೊತ್ತ ರುಕ್ಮಿಣಿಯಮ್ಮನಿಗೆ, ಯುಗಾಂತರದ ಸೀತೆಯಾಗದೆ ಪೂಲನ್‌ದೇವಿಯಾದ ಮಗಳ ಮೇಲೆ ಅಖಂಡ ಕೋಪವಿದ್ದರೂ, ಹಳ್ಳ ಕೊಳ್ಳದ ಕಗ್ಗತ್ತಲೆಯ ಕಾಡು ಹಾದಿಯಲ್ಲಿ ಮೊಮ್ಮಗನನ್ನು ಸೊಂಟಕ್ಕೇರಿಸಿ ಮಗಳಿಗೆ ಒಮ್ಮೆ ತೋರಿಸ ಹೊರಡುವ ಗಟ್ಟಿ ಗುಂಡಿಗೆಯ ಅಂತಃಕರಣವಿದೆ.

ಇವರ ಕತೆಗಳ ಮತ್ತೊಂದು ವಿಶೇಷವೆಂದರೆ, ಅಪರೂಪದ ಪದಪುಂಜಗಳನ್ನು ಇಲ್ಲಿ ಕಾಣಬಹುದು. 'ಘೋರ ನಿದ್ರೆ', 'ಯಮನಡುಕ' 'ಹುಲಿ ಹುಣ್ಣು', 'ಬೆಳಕಿನ ಕೋಲು', 'ಅಜ್ಜಿಯ ಕಟ್ಟಿಗೆ ಕಾಲು'.... ಕೆಲವು ಉದಾಹರಣೆಗಳು. ಇವರು ಭಾಷೆಯನ್ನು ಬಳಸುವ ಬಗೆ ಬೆರಗು ಮೂಡಿಸುತ್ತದೆ. 'ಅಜ್ಜಿ ಕತೆಯ ಹೋಳನ್ನು ಬಾಯಿಗೊಗೆದು ಕಟುಂ ಕಟುಂ ಜಗಿದಳು' 'ಹೊಟ್ಟೆಯ ಒಳಗೋಡೆಗೆಲ್ಲೋ ಕಟ್ಟಿಕೊಂಡಿರಬೇಕಾದ

ಮಾತು' 'ಕುಂತಲ್ಲೆ ಕುಂಡೆ ಹೊರಳಿಸಿ ಚಾಪೆ ಚೂರು ಮಾಡಿದವ', 'ಸೂರನ್ನೇರಿ ಬಂದ ಸೂರ್ಯಮದೇವ್ರು', 'ತಿಂದಿದ್ದೆಲ್ಲಾ ಸೀದಾ ಮಣ್ಣಿಗೇ'....ವಿಶೇಷ ಗಮನ ಸೆಳೆವ ಇಂಥಾ ನುಡಿಕಟ್ಟುಗಳು ಇವರ ಕತೆಯಲ್ಲಿ ಹೇರಳ ವಾಗಿ ಸಿಗುತ್ತವೆ. ಒಂದು ಜಾಗ, ಪರಿಸರ, ಪಂಗಡದ ಜನರ ಭಾಷಾಸಂಪತ್ತನ್ನು ಸೂರೆಮಾಡಿ ನಮಗೆ ಪರಿಚಯಿ ಸುತ್ತಾರೆ. ಆದರೆ ಕೆಲವೊಮ್ಮೆ ಆಡುಮಾತನ್ನು ಆಡಿ ದಂತೆಯೇ ಬರೆಯ ಹೊರಟಾಗ, ವಾಕ್ಯ ಅರ್ಥಕ್ಕೇ ತುಂಡರಿಸಿದಂತೆ, ಸರಾಗ ಓದಿಗೆ ತೊಡರುವುದುಂಟು. ಕೆಲವು ಕಡೆ ಮುದ್ರಣ ದೋಷದ ಕಾರಣವೋ ಏನೋ, ವಿರಾಮ ಚಿನ್ಹೆಗಳಿಲ್ಲದೆ, ಸ್ವಗತ, ಸಂಭಾಷಣೆ, ನಿರೂಪಣೆ ಗಳ ನಡುವೆ ಅಂತರ ತಿಳಿಯದೆ ಗಲಿಬಿಲಿಯುಂಟಾಗುವು ದುಂಟು. ಇಂಥಾ ಸಣ್ಣ ಗೊಂದಲಗಳಾಚೆಗೂ ವಿಶೇಷ ವಾಗಿ ಗಮನ ಸೆಳೆಯುವ ಸಂಕಲದ ಭಾಗೀರಥಿ ಹೆಗಡೆ ಅವರ 'ಪ್ರವಾಹ'.

'ಪ್ರವಾಹ'—ಭಾಗೀರಥಿ ಹೆಗಡೆ, ಮಹಿಳಾ ಸಾಹಿತ್ಯಕಾ, ನವನಗರ, ಹುಬ್ಬಳ್ಳಿ, 1995, ಪುಟಗಳು 142, ಬೆಲೆ 35 ರೂ.

★ ನೇಮಿಚಂದ್ರ

ಬಯಲು ಆಲಯ

ಹಲವಾರು ಕಥೆ ಕಾದಂಬರಿಗಳಿಂದ ಕನ್ನಡದ ಓದುಗರಿಗೆ ಈಗಾಗಲೇ ಪರಿಚಿತರಾಗಿರುವ ಶ್ರೀಮತಿ ರೇಖಾ ಕಾಖಂಡಕಿಯವರ 24ನೆಯ ಕಾದಂಬರಿ 'ಬಯಲು ಆಲಯ'. ಕರ್ಮವೀರ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಈ ಕಾದಂಬರಿ, ಸನ್ನಿ ವೇಶದ ಬವಣೆಗಳನ್ನೆಲ್ಲಾ ಮೆಟ್ಟಿ ನಿಂತು ಬದುಕು ಸಾಗಿ ಸಿದ ದಿಟ್ಟ ಮಹಿಳೆಯನ್ನು ಕೇಂದ್ರ ವಸ್ತುವಾಗಿ ಉಳ್ಳ ದ್ದಾಗಿದೆ. 'ಮಾಸ್ತಿಯವರ 'ಶೇಷಮ್ಮ'ನನ್ನು ನೆನಪಿ ಸುವ ಈ ಕಾದಂಬರಿಯ ಮುಖ್ಯ ಪಾತ್ರ ಶೇಷಕ್ಕ ತಾಯಿಯಿಲ್ಲದೆ, ತವರಿನ ಮಮತೆಯಿಲ್ಲದೆ, ಗಂಡನ ಮನೆಯ ಸುಖವನ್ನೂ ಕಾಣದೆ ಸ್ವಂತ ಸಾಮರ್ಥ್ಯ, ದುಡಿಮೆಯಿಂದ ಜೀವನ ಸಾಫಲ್ಯ ಪಡೆಯುವ ಉದಾತ್ತ ಪಾತ್ರವಾಗಿದ್ದಾಳೆ. ಶೇಷಕ್ಕನ ಬವಣೆಯ ಕಥೆ ನಮ್ಮ ಬಹುಪಾಲು ಹೆಣ್ಣುಮಕ್ಕಳ ಬವಣೆಯ ಕಥೆಯೇ ಆದರೂ, ಇಲ್ಲಿ ಶೇಷಕ್ಕ ಬವಣೆಯ ಜೀವನವನ್ನು ನಿರ್ವಹಿಸಿದ ರೀತಿ ಕುತೂಹಲಕರವಾಗಿದೆ.

ಮಹಾಭಾರತದ ವೀರಾಧಿವೀರರೈವರ ಪತ್ನಿ ಯಾದರೂ ದ್ರೌಪದಿಯ ಕಷ್ಟದ ಬವಣೆ ತಪ್ಪಲಿಲ್ಲ. ಇನ್ನು ಹುಚ್ಚು ಗಂಡನ ಕೈಹಿಡಿದ ಶೇಷಕ್ಕ ತನ್ನ ಸಮಸ್ಯೆಯ ಪರಿಹಾರಕ್ಕೆ ಗಂಡನನ್ನಾಗಲೀ, ಶ್ರೀಕೃಷ್ಣ ಪರಮಾತ್ಮನ ಕೃಪೆಯನ್ನಾಗಲೀ, ನೆಚ್ಚಿಕೊಳ್ಳಲು ಸಾಧ್ಯ ವಿಲ್ಲ, ಎಂಬಂತಹ ವಿಚಾರವು ಕಾದಂಬರಿಯುದ್ದಕ್ಕೂ ಧ್ವನಿಸುತ್ತಾ ಹೋಗುತ್ತದೆ.

"ಶೇಷಕ್ಕ ಅಚ್ಚಾ ಏನೂ ಅರೀದ ಕೂಸಿನ್ಹಂಗ, ನಿನ್ನ ಸಂಸಾರ ನಿನಗೆ ಸೇರಿದ್ದು....ತುಂಬಿದ ನದಿಯೊಳಗ ದೋಣಿ ಬಿಟ್ಹಂಗ ನಿನ್ನ ಸಂಸಾರ ದೋಣಿಯೊಳಗ ನಿನ್ನ ಕೂಡಿಸಿಬಿಟ್ಟನವ್ವಾ. ಹುಟ್ಟೂ ನಿಂದ....ದೋಣಿನೂ ನಿಂದ ಮಗಳ. ಅದನ್ನ ದಡಕ್ಕ ಹಚ್ಚಾಕೀನು....ನೀನss" —ಇದು ಶೇಷಕ್ಕನ ಒಟ್ಟು ಸ್ವರೂಪವನ್ನು ಬಯಲು ಮಾಡುತ್ತದೆ. ಹೆಣ್ಣು ಅಡಿಗೆ ಮನೆಯ ಚೌಕಟ್ಟಿನಿಂದ ಹೊರಬರದಂಥ ಒಂದು ಕಾಲದಲ್ಲಿ ಶೇಷಿ ತನ್ನ ಸಂಸಾರ ವನ್ನು ಕಟ್ಟಿಕೊಂಡು ಸಮುದ್ರಕ್ಕೆ ಈಸಿ ಬಿದ್ದಳು. ಶೇಷಿಯ ರಟ್ಟೆಯೊಳಗೆ ಅಲೆಗಳೊಡನೆ ಹೋಳೆ ದಾಟಿ ಕೊಂಡು ಈಸಿ ದಡ ಮುಟ್ಟುತ್ತೇನೆಂಬ ಛಾತಿಯಿಂದ ಬದುಕು ಎದುರಿಸಿ ಜಯಶಾಲಿಯಾದಳು. ಇದು ಕತೆಯ ಮುಖ್ಯ ದ್ರವ್ಯ.

ಗೋವಿಂದಯ್ಯನ ಅನ್ಯಾಯಗಳನ್ನು ತುಟಿ ಕಚ್ಚಿ ಸಹಿಸುವಾಗ ಮನುಷ್ಯ-ಮನುಷ್ಯರ ನಡುವಿನ ಸಂಬಂಧ ಗಳು ಘರ್ಷಣೆಯಾಗುವಾಗ ಕಿಡಿ ಮಾತ್ರ ಹುಟ್ಟುತ್ತದೆ, ಎಂದುಕೊಂಡ ಶೇಷಕ್ಕ ಕಾದಂಬರಿಯ ಕೊನೆಯಲ್ಲಿ ಅದೇ

'ಬಯಲು ಆಲಯ'—ಲೇ. ರೇಖಾ ಕಾಖಂಡಕಿ, (ಸಾಮಾಜಿಕ ಕಾದಂಬರಿ) ರಾಘವ ಪ್ರಕಾಶನ, ವಿಜಯ ನಗರ, ಬೆಂಗಳೂರು-40.

ಮನುಷ್ಯ-ಮನುಷ್ಯನ ನಡುವಿನ ಸಂಬಂಧ ತಂಪಾದ ಬೆಳದಿಂಗಳಂತಹ ಬೆಳಕನ್ನೂ ತರಬಲ್ಲದು, ಎಂಬುದನ್ನು ಕಾದಂಬರಿಯು ಒಟ್ಟಾರೆಯಾಗಿ ಧ್ವನಿಸುತ್ತದೆ.

ಕಾದಂಬರಿ ಪ್ರಕಾರದಲ್ಲಿ ಈಗಾಗಲೇ ಸಾಕಷ್ಟು ಕೃಷಿ ನಡೆಸಿರುವ ಶ್ರೀಮತಿ ರೇಖಾ ಕಾಖಂಡಕಿಯವರ ಈ ಕಾದಂಬರಿಯು ಅವರ ಹಿಂದಿನ ಕಾದಂಬರಿಗಳಂತೆ ಪ್ರಾದೇಶಿಕತೆಯ ಅಂಶವನ್ನು ಒಳಗೊಂಡಿದೆ. ಉತ್ತರ ಕರ್ನಾಟಕದ ಸಂಸ್ಕೃತಿಯ ವಿವರಗಳನ್ನು ಕೊಡುತ್ತಲೇ, ಆ ನೆಲದಲ್ಲಿ ಹುಟ್ಟಿ, ಬೆಳೆದು, ಹೆಮ್ಮರವಾದ ವ್ಯಕ್ತಿತ್ವವೊಂದರ ಚಿತ್ರಣದೊಂದಿಗೆ ಒಂದು ನಿರ್ದಿಷ್ಟ ಸಾಂಸ್ಕೃತಿಕ ಸನ್ನಿವೇಶವೊಂದರ ದಟ್ಟ ಅನುಭವವನ್ನು ನೀಡುವಲ್ಲಿ ಕೃತಿ ಸಫಲವಾಗಿದೆ.

★ ಆಶಾ

ಕಂಬನಿ

ಶ್ರೀಮತಿ ಅನ್ನಾ ಚಾಂಡಿ, ಭಾರತದ ಮೊದಲ ಹೈಕೋರ್ಟ್ ನ್ಯಾಯಾಧೀಶೆ. ಇತ್ತೀಚೆಗೆ ತಿರುವನಂತಪುರದಲ್ಲಿ ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು.

ಮೊದಲ ಮಹಿಳಾ ವಿದ್ಯಾರ್ಥಿಯಾಗಿ ತಿರುವನಂತಪುರಂನ ಕಾನೂನು ಕಾಲೇಜಿಗೆ 1927ರಲ್ಲಿ ಸೇರಿದ ಈಕೆ ಭಾರತದಲ್ಲೇ ಪ್ರಥಮ ಕಾನೂನು ಕಲಿತ ಮಹಿಳೆ. ಅವರ ನ್ಯಾಯಾಲಯ ವೃತ್ತಿ ಜೀವನದಲ್ಲಿ ಮುನ್ಸೀಫರಾಗಿ, ನಂತರ ಕೇರಳದ ಹಲವಾರು ಸೆಷನ್ಸ್ ನ್ಯಾಯಾಲಯಗಳಲ್ಲಿ ನ್ಯಾಯಾಧೀಶೆಯಾಗಿ ಕೆಲಸ ಮಾಡಿ 1959ರಿಂದ 1967ರವರೆಗೆ ತಿರುವನಂತಪುರದ ಹೈಕೋರ್ಟಿನಲ್ಲಿ ನ್ಯಾಯಾಧೀಶೆಯಾಗಿ ಕೆಲಸ ಮಾಡಿದ್ದಾರೆ.

Reg No MAG (5) PRC, DEGL 036/86/87
BOOK-POST/Periodicals

To,

If undelivered please return to :
Jagruthi Mahila Adhyayana Kendra
401, Vijay Tower, 2nd Main, RPC Layout
Vijayanagar, II Stage, Bangalore-40
Pin-560 040